ಶ್ರೀ ಎಚ್. ಸಿ. ಶ್ರೀಕಂಠಯ್ಯ.—ತಮ್ಮ ಶಾಸನಸಭಾ ಸದಸ್ಯತ್ವ ಮುಗಿಯುವದರೊಳಗೆ ಮಾಡುತ್ತೇನೆ.

SRI B. B. SAYANAK.—According to the Corporation Act there is no advisory body. In Belagaum they have appointed an advisory body last month. The Corporation authorities have reconstituted this body. What is the necessity of this advisory body? Is the Government going to cancel this body and hold election ?

SRI H. C. SRIKANTAIYA.—I have to examine; I have no particulars about that now.

Strike by the Agro-Industries Corporation Employees

ಶ್ರೀ ಪಿ. ರಾಮದೇವ್.—ಕಳೆದ ಮೂರು ದಿವಸದಿಂದ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ ನೌಕರರು ಮುಷ್ಕರವನ್ನು ಮಾಡುತ್ತಿದ್ದಾರೆ. ಅವರು ಅಮರಣಾಂತ ಮುಷ್ಕರವನ್ನು ಕೂತಿದ್ದಾರೆ. ಸುಮಾರು ಎರಡೂವರೆ ಸಾವಿರ ಜನ ಕೆಲಸಗಾರರು ಕೆಲಸವಿಲ್ಲದೆ ಮುಷ್ಕರ ಕೂತಿದ್ದಾರೆ.

ಉಪಾಧ್ಯಕ್ಷರು.—೧೯ನೇ ತಾರೀಖು ಇದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ

ಶ್ರೀ ಎಚ್. ಡಿ. ದೇವೇಗೌಡ.—ನಾಳೆಯ ದಿವಸ ಮೈಕೋ ನೌಕರರ ಪ್ರಮುಖ ಪ್ರಶ್ನೆಯೂ ಇದೆ. ಸಹಸ್ರಾರು ಜನ ಕಾರ್ಮಿಕರು, ಅವರ ಕುಟುಂಬಗಳಿಗೆ ಅನ್ನವಿಲ್ಲದೆ ಜೀವನ ನಡೆಸತಕ್ಕ ಪರಿಸ್ಥಿತಿ ಇದೆ. ಈ ವಿಷಯವನ್ನು ತೆಗೆದುಕೊಳ್ಳದೆ ಬೇರೆ ವಿಷಯಗಳಿಗೆ ನಾವು ಹೋಗುವ ಅಗತ್ಯವಿಲ್ಲ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಲಕ್ಷಾಂತರ ರೂಪಾಯಿಗಳ ಹಣ ದುರುಪಯೋಗವಾಗಿದೆ. ನೌಕರರನ್ನು ಪೀನಲೈಸ್ ಮಾಡತಕ್ಕ ಕ್ರಮವನ್ನು ತೆಗೆದುಕೊಂಡಿದ್ದಾರೆ. ನಾಳೆ, ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ, ಈ ಎರಡು ವಿಷಯಗಳನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ.

MADAM DEPUTY SPEAKER.—Tomorrow it will be taken up.

Budget Estimates for 1979-80—Demands for Grants
Demands Nos: 54 and 55

SRI V. M. KUSNOOR (Minister for Co-operation).—Sir, on the recommendation of the Governor, I beg to move:

> " That a sum not exceeding Rs. 22,02,26,000 inclusive of the sum granted 'on account' be granted to the Government to defray the charges which will come in course of payment during the financial year ending, 31st day of March 1)80 in respect of Demand No. 54, Co-operation (excluding Regulated Markets)".

The question was proposed.

SRI A. B. JAKANUR (Minister of State for Regulated Markets).—Sir, on the recommendation of the Governor, I beg to move:

> " That a sum not exceeding Rs. 1,99,27,000 inclusive of the sum granted 'on account' be granted to the Govern-

ment to defray the charges which will come in course of payment during the financial year ending 31st day of March 1980 in respect of Demand No. 55 'Regulated Markets'.

The question was proposed.

MADAM DEPUTY SPEAKER.—Both the Demands are before the House for discusion.

ಶ್ರೀ ವೈ. ರಾಮಕೃಷ್ಣ (ಆನೇಕಲ್) —ಮಾನ್ಯ ಅಧ್ಯಕ್ಷಣೀಯವರೇ. ಈ ಸಭೆಯ ಮುಂದೆ ಈ ದಿವಸ ಸಹಕಾರ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ. ನಾನು ಇದನ್ನು ಬಹಳ ತೀವ್ರವಾಗಿ ವಿರೋಧಿಸಬೇಕಾಗಿದೆ. ಕಾರಣ ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ಸಹಕಾರ ಚಳುವಳಿ ಎಷ್ಟರಮಟ್ಟಿಗೆ ಯಶಸ್ವಿಯಾಗಿ ನಡೆಯಬೇಕಾಗಿತ್ತೋ ಅಷ್ಟು ಯಶಸ್ವಿಯಾಗಿ ಅದು ನಡೆದಿಲ್ಲವೆಂದು ನಾನು ತುಂಬ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಇದನ್ನು ನಾನು ಹೇಳುವಾಗ ನನ್ನ ಮನಸ್ಸಿನಲ್ಲಿ ಅಕ್ಕಪಕ್ಕದ ರಾಜ್ಯಗಳನ್ನು ನೆರೆಹೊರೆಯ ರಾಜ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಯಾವ ರೀತಿಯಲ್ಲಿ ಸಹಕಾರ ಚಳುವಳಿ ನಡೆಯುತ್ತದೆ, ನಮ್ಮ ರಾಜ್ಯದಲ್ಲಿ ಹೇಗೆ ನಡೆಯುತ್ತಿದೆ ಎಂದು ತುಲನೆ ಮಾಡಿರುತ್ತೇನೆ. ಇದು ನಿಜವಾಗಿಯೂ ಕೂಡ ಪ್ರತಿಯೊಬ್ಬರ ಮನಸ್ಸಿಗೂ ನೋವಾಗುವಂಥ ವಿಷಯ. ಇವತ್ತು ಈ ಇಲಾಖೆಯು ತನ್ನ ಕಾರ್ಯವನ್ನು ನಿರ್ವಹಣೆ ಮಾಡುವಲ್ಲಿ ವಿಫಲಗೊಂಡಿದೆ. ಕರ್ನಾಟಕ ಜನತೆ ಎಷ್ಟು ನಂಬಿಕೆಯನ್ನು ಈ ಸಹಕಾರ ಇಲಾಖೆಯಲ್ಲಿ ಇಟ್ಟಿದ್ದರೋ ಆ ನಂಬಿಕೆಗೆ ದ್ರೋಹ ಬಂದಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಜನ ಇದರ ಬಗ್ಗೆ ಬೇಸತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ಸಹಕಾರ ಸಂಘಗಳಲ್ಲಿ ಯಾವ ಸಹಕಾರ ಸಂಘ ಚನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾದ ಪರಿಸ್ಥಿತಿ ಇತ್ತು. ಇಂದಿನ ಪರಿಸ್ಥಿತಿಯನ್ನು ನಾವು ನೋಡಿದಾಗ ಕರ್ನಾಟಕ ರಾಜ್ಯದಲ್ಲಿ ಯಾವ ಸಹಕಾರ ಸಂಘ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹುಡುಕಿ ನೋಡತಕ್ಕ ಕಾಲ ಬಂದಿದೆ. ಇದಕ್ಕೆ ಕಾರಣಗಳನ್ನು ಎಲ್ಲರೂ ಹುಡುಕಬೇಕಾಗಿದೆ. ಗುಜರಾತಿನಲ್ಲಿದ್ದ ಹಾಗೆ, ಮದ್ರಾಸಿನಲ್ಲಿದ್ದ ಹಾಗೆ, ಆಂಧ್ರದಲ್ಲಿದ್ದ ಹಾಗೆ, ನಾವು ಈ ಸಹಕಾರ ಚಳುವಳಿಯನ್ನು ನಡೆಸಬೇಕಾದರೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ತಾವು ಶುದ್ಧ ಮನಸ್ಸಿನಿಂದ ಎಲ್ಲಾ ಸೊಸೈಟಿಗಳನ್ನು ಶುದ್ಧೀಕರಣ ಮಾಡಬೇಕು, ಮತ್ತು ಶುದ್ಧೀಕರಣಮಾಡುವ ಪ್ರತಿಭೆಯನ್ನು ತಾವು ತೊಡಬೇಕು. ಶುದ್ಧೀಕರಣ ಆಗದೇ ಹೋದರೆ, ಕೋಆಪರೇಟಿವ್ ಚಳುವಳಿ ಸಮಾಜದ ಆರ್ಥಿಕ ರಂಗವನ್ನು ಮುಂದೆ ತರಲಾಗುವುದೆಂದು ನಾನು ಹೇಳುತ್ತೇನೆ. ೧೮೮೪ರಲ್ಲಿ ಹಾಲೆಂಡ್ ಮತ್ತು ಇಂಗ್ಲೆಂಡ್‌ನಲ್ಲಿ ಕನ್‌ಸ್ಯೂಮರ್ ಮೂವ್‌ಮೆಂಟ್, ಅಂದರೆ ಗ್ರಾಹಕರ ಚಳುವಳಿಯಿಂದ ಪ್ರಾರಂಭವಾದಂಥ ಸೊಸೈಟಿಗಳು ಅತಿ ಶೀಘ್ರವಾಗಿ ಜನತೆಯ ಮನಸ್ಸನ್ನು ಒಲಿಸಿ ಅಲ್ಲಿ ಶಾಶ್ವತವಾದಂಥ ತಳಹದಿಯ ಮೇಲೆ ಚೆನ್ನಾಗಿ ನಡೆದುಕೊಂಡು ಹೋಗುತ್ತಿವೆ. ಅದೇ ರೀತಿಯಲ್ಲಿ ಅಮೆರಿಕ ಮತ್ತು ಕೆನಡ, ದೇಶಗಳಲ್ಲಿ ಇವತ್ತಿನ ದಿವಸ ಮಾರ್ಕೆಟ್ ಡಿವಿಷನ್ ಇಡೀ ಪ್ರಪಂಚದಲ್ಲಿಯೇ ಹೊಗಳಿಸಿಕೊಳ್ಳತಕ್ಕ ಸ್ಥಿತಿಗೆ ಬಂದಿದೆ. ಅದರೆ ನಮ್ಮ ರಾಷ್ಟ್ರದಲ್ಲಿ, ೧೯೪೭ರ ತನಕ ಇದರ (ಕೋಆಪರೇಟಿವ್ ಮೂವ್‌ಮೆಂಟ್) ಚರಿತ್ರೆಯನ್ನು ತೆಗೆದು ನೋಡಿದಾಗ ಚೆನ್ನಾಗಿ ನಡೆದು ಕೊಂಡು ಬಂದಿವೆ. ಅನಂತರ ಈ ಒಂದು ಚಳುವಳಿಗೆ ಬರಬಾರದಂಥ ರೋಗ ತಗುಲಿದಂತೆ ಕಾಣುತ್ತದೆ. ಇದಕ್ಕೆ ಯಾವ ಫಿಜಿಷಿಯನ್ ಕೂಡ ಔಷಧಿಯನ್ನು ಕೊಡಲಿಕ್ಕಾಗುವುದಿಲ್ಲ. ಅವರು ಎಷ್ಟೇ ಪ್ರಸಿದ್ಧರಾದರೂ ಕೂಡ ಇದಕ್ಕೆ ಔಷಧಿಯನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಈ ಇಲಾಖೆಯಲ್ಲಿ ಏನಾಗಿದೆ ಎಂದರೆ. ಸಿ ಮತ್ತು ಒ, ಈ ಎರಡು ಪದಗಳನ್ನು ತೆಗೆದರೆ, ಆಪರೇಷನ್ ಎಂದಷ್ಟೇ ಉಳಿಯುತ್ತದೆ. ಇದು ಆಪರೇಷನ್ ಡಿಪಾರ್ಟ್‌ಮೆಂಟ್ ಆಗಿದೆ ಎಂದು ನಾವು ಹೇಳಬಹುದಾಗಿದೆ. ಗ್ರಾಮಾಂತರ ಪ್ರದೇಶಗಳಿಂದ ಹಿಡಿದು. ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದಲ್ಲಿಯೂ ಇದರ ಕರ್ತವ್ಯ ನಿರ್ವಹಣೆ ಹದಗೆಟ್ಟಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಪರಕೀಯ ರಾಷ್ಟ್ರದಲ್ಲಿ ಯಶಸ್ವಿಯಾದದ್ದು ನಮ್ಮ ರಾಷ್ಟ್ರದಲ್ಲಿ ಸೋಲು ಆಗಲಿಕ್ಕೆ ಕಾರಣವೇನು, ಈ ಕಾರಣವನ್ನು ನಾವು ಕಂಡುಹಿಡಿಯಬೇಕಾಗಿದೆ. ಬೇರೆ ರಾಷ್ಟ್ರಗಳಲ್ಲಿ. ಇದರ ಬಗ್ಗೆ ಜನತೆ ಸ್ವಯಂ ಪ್ರೇರಿತರಾಗಿ ಮುಂದೆ ಬರುತ್ತಾರೆ: ಆದರೆ ನಮ್ಮ ರಾಜ್ಯದಲ್ಲಿ. ಜನ ಸ್ವಯಂ ಪ್ರೇರಿತರಾಗಿ

ಮುಂದೆ ಬರುವುದಿಲ್ಲ. ಇದರಲ್ಲಿ ನಮ್ಮ ಸ್ವಂತ ಹಣವನ್ನು ಮಾಡುತ್ತೇವೆನ್ನುವ ಜವಾಬ್ದಾರಿ ಜನತೆಯಲ್ಲಿ ಬಂದಿದ್ದರೆ ಅವರು ಸ್ವಯಂ ಪ್ರೇರಿತರಾಗಿ ಮುಂದೆ ಬರುತ್ತಿದ್ದರು, ಆದರೆ ಇವುಗಳಲ್ಲಿ ಹೂಡತಕ್ಕ ಹಣ ಸರ್ಕಾರದ್ದು ಎನ್ನುವ ಭಾವನೆ ನಮ್ಮ ಜನರಲ್ಲಿದೆ. ಸರ್ಕಾರದ ಹಣ ನಮ್ಮ ಹಣ. ಇದಕ್ಕೆ ನಾವು ಲಾಭ ಪಡೆಯಬೇಕು ಎಂದು ಎಚ್ಚರಿಕೆ ವಹಿಸುವಂಥ ಜನರು ಮುಂದೆ ಬರಬೇಕು. ಆದರೆ ನಮ್ಮ ರಾಜ್ಯದಲ್ಲಿ ಜನತೆಯ ಮನಸ್ಸಿನಲ್ಲಿ ಈ ಸೊಸೈಟಿಗಳಲ್ಲಿ ಹೂಡತಕ್ಕ ಹಣ ಸರ್ಕಾರದ್ದು, ಷೇರು ಕ್ಯಾಪಿಟಲ್ ಸರ್ಕಾರದ್ದು ವರ್ಕಿಂಗ್ ಕ್ಯಾಪಿಟಲ್ ಹಾಗೂ ಗ್ರ್ಯಾಂಟ್ ಇನ್ ಏಡ್ ಸರ್ಕಾರದ್ದು ಎನ್ನುವ ಭಾವನೆ ಇದೆ. ಸರ್ಕಾರದ ಹಣ ನನ್ನ ಹಣ, ಎನ್ನುವ ಭಾವನೆ ಇಲ್ಲದೆ ಇದ್ದುದರಿಂದ ಈ ಹಣದ ಮೇಲೆ ಹಿಡಿತ ತಪ್ಪಿದೆ.

೪-೦೦ ಪಿ. ಎಂ.

ಈ ಸಹಕಾರಿ ಸಂಘಗಳನ್ನು ನಡೆಸುವ ಜನರ ಮೇಲೆ ಹತೋಟಿ ಇಲ್ಲ; ಇವುಗಳ ಮೇಲ್ವಿಚಾರಕರಾಗಿ ನೋಡಿಕೊಳ್ಳುವ ಅಧಿಕಾರಿಗಳು ಅಷ್ಟು ನಿಗಾ ವಹಿಸಿ ಜವಾಬ್ದಾರಿಯಿಂದ ಕೆಲಸ ಮಾಡುತ್ತಿಲ್ಲ. ಇದರ ಮೂಲ ಏನೆಂಬುದನ್ನು ತಾವು ಪರೀಕ್ಷೆ ಮಾಡಿ ನೋಡಬೇಕು. ಈ ಒಂದು ಕಾಯಿಲೆಯನ್ನು ಹೋಗಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇವೊತ್ತು ಕೆಲವು ಸೊಸೈಟಿಗಳಲ್ಲಿ ನೀತಿ ಮತ್ತು ನ್ಯಾಯ ಎಂಬುದು ನಾಪತ್ತೆಯಾಗಿದೆ. ಇದಕ್ಕೆ ಯಾರು ಕಾರಣರು? ಅನೀತಿ ಮತ್ತು ಅನ್ಯಾಯ ಇವು ನೀತಿ ಮತ್ತು ನ್ಯಾಯದ ಸ್ಥಾನಗಳನ್ನು ಪಡೆದಿವೆ ಇದರ ಹೊಣೆಗಾರಿಕೆಯನ್ನು ಸರ್ಕಾರವೇ ಹೊತ್ತು ಕೊಳ್ಳಬೇಕಾಗಿದೆ. ಮುಖ್ಯವಾಗಿ ಸರ್ಕಾರಕ್ಕೂ ಸಹಕಾರ ಸಂಘಗಳಿಗೂ ಅತಿ ಹೆಚ್ಚಿನ ಸಂಬಂಧವಿರಬಾರದು. ಪಾಶ್ಚಾತ್ಯ ದೇಶಗಳಲ್ಲಿ ಇಂತಹ ಹತೋಟಿ ಇಲ್ಲ. ಅಲ್ಲಿ ಸರ್ಕಾರದ ಹಣವೂ ಇಲ್ಲ ಮತ್ತು ಸರ್ಕಾರದ ಅಧಿಕಾರಿಗಳ ಹಿಡಿತವೂ ಇಲ್ಲ. ಆದರೆ ನಾವು ಇಲ್ಲಿ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಎಂದು ವಿಶೇಷವಾದಂಥ ಕಾನೂನನ್ನು ಮಾಡಿದ್ದೇವೆ. ಇದು ತಪ್ಪು ಎಂದು ನಾನು ಹೇಳುವುದಿಲ್ಲ; ಅದೇ ಪಾಶ್ಚಾತ್ಯ ದೇಶಗಳಲ್ಲಿ ಇಂತಹ ವಿಶೇಷವಾದಂಥ ಕಾನೂನನ್ನು ಅವರು ಮಾಡಿಕೊಂಡಿಲ್ಲ. ಒಂದು ವೇಳೆ ಅಲ್ಲಿನ ಸೊಸೈಟಿಗಳಲ್ಲಿ ಹಣದ ದುರುಪಯೋಗ ಏನಾದರೂ ಆದರೆ, ಅದನ್ನು ನಡೆಸುವವರು ನಮ್ಮ ಐ.ಪಿ.ಸಿ. ಇಲ್ಲವೇ ಸಿ.ಆರ್.ಪಿ.ಸಿನಲ್ಲಿ ಹೇಳಿರುವ ಪ್ರಕಾರ ಆ ದೇಶಗಳ ಜನರಲ್ ಕಾನೂನಿನ ಶಿಕ್ಷೆಗೆ ಒಳಗಾಗುತ್ತಾರೆ. ಆದರೆ ಇಲ್ಲಿ ನಮ್ಮ ಸೊಸೈಟಿಗಳಲ್ಲಿ ನಡೆಯುತಕ್ಕಂಥ ಭ್ರಷ್ಟಾಚಾರ, ಹಣದ ದುರುಪಯೋಗ, ಲಂಚಗುಳಿತನ, ಆಡಂಬರ ಮತ್ತು ದಬ್ಬಾಳಿಕೆ, ಸ್ವಜನಪಕ್ಷಪಾತ ಮತ್ತು ರಾಜಕೀಯ, ಜನರಿಗೆ ನಂಬಿಕೆ ದ್ರೋಹ ಮಾಡುವುದು, ಜನರಿಗೆ ಆಶಾಭಂಗ ಮಾಡುವುದು. ಇವೆಲ್ಲಕ್ಕೂ ಕೂಡ ತಾವು ಒಂದು ಸಿದ್ಧಾಂತವನ್ನು ಕಂಡುಹಿಡಿಯಬೇಕಾಗಿದೆ. ನಿಮ್ಮಲ್ಲಿ ಆ ಒಂದು ಶಕ್ತಿ ಇದೆ. ಇದರಲ್ಲಿ ನಿಮಗೆ ಆಳವಾದ ಅನುಭವವಿದೆ. ವಯಸ್ಸು ಇದೆ. ಚೆನ್ನಾಗಿ ಇದನ್ನು ಅಧ್ಯಯನ ಮಾಡಿದ್ದೀರಿ, ಈ ಎಲ್ಲ ಕಾರಣಗಳಿಂದ ತಮಗೆ ಕ್ಯಾಬಿನೆಟ್ ರ್ಯಾಂಕ್‌ನ್ನು ಕೊಟ್ಟಿದ್ದಾರೆ. ಅದನ್ನು ತಾವು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕು; ಯಾವ ಯಾವ ಸೊಸೈಟಿಗಳಲ್ಲಿ ಹಣದ ದುರುಪಯೋಗವಾಗಿದೆ ಎಂಬುದನ್ನು ಕಂಡುಹಿಡಿದು, ಅದಕ್ಕೆ ಕಾರಣಕರ್ತರಾದವರನ್ನು ಸದೆಬಡೆಯಿರಿ. ಈ ಮಾತನ್ನು ನಾನು ಏತಕ್ಕೆ ಹೇಳುತ್ತೇನೆಂದರೆ, ನಮ್ಮ ದೇಶದಲ್ಲಿ ಶೇಕಡಾ ೮೦ ರಷ್ಟು ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುತ್ತಾರೆ. ಉಳಿದ ಶೇಕಡಾ ೨೦ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಾರೆ. ಈ ಜನರು ನಗರ ಪ್ರದೇಶಗಳಲ್ಲಿ ಅರ್ಬನ್ ಸೊಸೈಟಿಗಳನ್ನು ನಿರ್ಮಾಣ ಮಾಡಿಕೊಂಡು ಚೆನ್ನಾಗಿ ನಡೆಸುತ್ತಿದ್ದಾರೆ. ಎಲ್ಲ ರಾಜ್ಯಗಳಲ್ಲಿಯೂ ಅಲ್ಲಿನ ನಗರ ಪ್ರದೇಶಗಳಲ್ಲಿ ಇಂತಹ ಸೊಸೈಟಿಗಳು ಇವೆ. ಇವು ಚೆನ್ನಾಗಿ ನಡೆಯಲು ಕಾರಣವಿಷ್ಟೆ. ಈ ಸೊಸೈಟಿಗಳಲ್ಲಿ ಸರ್ಕಾರದ ಹಣ ಇಲ್ಲ, ಸರ್ಕಾರದ ಅಧಿಕಾರಿಗಳ ಕೈವಾಡ ಇಲ್ಲ, ಮಂತ್ರಿಗಳ ಆದೇಶ ಅಲ್ಲಿಗೆ ಹೋಗುವುದಿಲ್ಲ, ಆದಕಾರಣ ಅವು ಚೆನ್ನಾಗಿ ನಡೆಯುತ್ತವೆ ಅದೇ ಶೇಕಡಾ ೮೦ರಷ್ಟು ಜನರು ವಾಸಮಾಡುತ್ತಿರುವ ಗ್ರಾಮಾಂತರ ಪ್ರದೇಶಗಳಲ್ಲಿ ೨೨ ಸಾವಿರ ಸೊಸೈಟಿಗಳು ಏನಿವೆ, ಅವುಗಳ ಭವಿಷ್ಯ ಚಿಂತಾಜನಕವಾಗಿವೆ. ಇವುಗಳ ಪೈಕಿ ಎಷ್ಟು ಸೊಸೈಟಿಗಳು ಚೆನ್ನಾಗಿ ನಡೆಯುತ್ತಿವೆ ಎಂಬುದನ್ನು ನೀವೇ ಹೇಳಬೇಕು? ಬೈಲಾದಲ್ಲಿರತಕ್ಕಂಥ ಮೂಲೋದ್ದೇಶಗಳನ್ನು ಈಡೇರಿಸತಕ್ಕಂಥ ಸೊಸೈಟಿಗಳ ಹೆಸರುಗಳನ್ನು ತಾವು ಹೇಳಬೇಕು? ಹಳ್ಳಿಗಳಲ್ಲಿ ಶೇಕಡಾ ೮೦ರಷ್ಟು ಜನರೇನಿದ್ದಾರೆ ಇವರುಗಳ ಪೈಕಿ ಶೇಕಡಾ ೬೫ರಷ್ಟು ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ ಅವರನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಿರಿ, ಬಡವರು ಎಂದು ಕರೆಯಿರಿ

ಹಿಂದುಳಿದವರು ಎಂದು ಕರೆಯಿರಿ, ಹರಿಜನ ಮತ್ತು ಗಿರಿಜನರು ಎಂದು ಕರೆಯಿರಿ, ಈ ಸಮಾಜದಲ್ಲಿ ಹುಟ್ಟಿರತಕ್ಕಂಥ ದೌರ್ಭಾಗ್ಯರೆಂದು ಕರೆಯಿರಿ, ಕಾರ್ಮಿಕರೆಂದು ಕರೆಯಿರಿ, ಕೂಲಿಗಾರರೆಂದು ಕರೆಯಿರಿ, ಇಂತಹವರ ಜೀವನ ಹಸನಾಗಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ತಾವು ಒಂದು ಉಪಾಯ ವನ್ನು ಕಂಡುಹಿಡಿಯಬೇಕು ಏಕೆಂದರೆ ಇವರುಗಳು ಎಷ್ಟೇ ದುಡಿದರೂ ಸಹ ಎರಡು ಹೊತ್ತು ಊಟ ಮಾಡಲು ಸಾಧ್ಯವಾಗುತ್ತಿಲ್ಲ; ಅರೆ ಹೊಟ್ಟೆ ಊಟವೇ ಇವರಿಗೆ ಗತಿ; ಅರೆ ಬಟ್ಟೆ, ವಸತಿ ಸೌಲಭ್ಯ ಇಲ್ಲ ದಿರುವುದು, ವಿದ್ಯಾಭ್ಯಾಸವಿಲ್ಲದೆ; ಕೆಲಸವಿಲ್ಲದೆ ಅಲೆದಾಡುವ ಈ ಜನರನ್ನು ನಾವು ಮುಂದೆ ತರಬೇಕಾ ಗಿದೆ. ನಗರಗಳಲ್ಲಿ ವಾಸಮಾಡುವ ಶೇಕಡಾ ೨೦ರಷ್ಟು ಜನರು ಏನಿದ್ದಾರೆ, ಇವರ ಜೀವನ ಮಟ್ಟ ಯಾವ ರೀತಿಯಲ್ಲಿದೆ ಎಂಬುದನ್ನು ತುಲನೆಮಾಡಿ ನೋಡಬೇಕಾಗಿದೆ. ಅಂಕಿಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ಈಗ ಐಶ್ವರ್ಯ ಏನಿದೆ, ಅವರಲ್ಲಿ ಶೇಕಡಾ ೮೦ರಷ್ಟು ಐಶ್ವರ್ಯ ಶೇಕಡಾ ೨೦ರಷ್ಟು ಜನರ ಕೈಯಲ್ಲಿ ಇದೆ. ಇನ್ನುಳಿದ ಶೇಕಡಾ ೨೦ರಷ್ಟು ಐಶ್ವರ್ಯ ಶೇಕಡಾ ೮೦ರಷ್ಟು ಇರುವಂತಹ ಜನರ ಕೈಯಲ್ಲಿ ಇದೆ. ಇದನ್ನು ಸರಿಮಾಡಿಸುವುದಕ್ಕೆ ಯಾವ ನೀತಿಯನ್ನು ಉಪಯೋಗಿಸಬೇಕೆಂಬುದೇ ಈಗ ನಮ್ಮ ಮುಂದಿರುವ ಸಮಸ್ಯೆ. ಈ ವಿಚಾರದಲ್ಲಿ ಸಲಹೆ ಪಡೆಯಲು ಅನೇಕ ಕಮಿಟಿಗಳನ್ನು ನೇಮಕ ಮಾಡಲಾಯಿತ್ತು. ಆದರೆ ಕಪ್ಪು ಹಣವನ್ನು ಪತ್ತೆಮಾಡಲು ಅವರ ಕೈಯಲ್ಲಿ ಆಗಲಿಲ್ಲ. ಭೂತಲಿಂಗಮ್ ಕಮಿಟಿಯೂ ಈ ಕಮಿಟಿಗಳ ಪೈಕಿ ಒಂದು. ಈ ಕಮಿಟಿಯವರು ಕಾರ್ಯಾಂಗದಲ್ಲಿ ಕೆಲಸ ಮಾಡುವವರು ಎಷ್ಟೆಷ್ಟು ಸಂಬಳ ಪಡೆಯುತ್ತಿದ್ದಾರೆಂಬ ಬಗ್ಗೆ ತಮ್ಮ ವರದಿಯಲ್ಲಿ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅವರ ಪ್ರಕಾರ ಕೇಂದ್ರಸರ್ಕಾರದಲ್ಲಿ ಮೇಲಿನ ಹಂತದಲ್ಲಿರುವ ಅಧಿಕಾರಿಗಳು ವರ್ಷವೊಂದಕ್ಕೆ ೬೭,೪೨೧ ರೂ. ಗಳನ್ನು, ಪಬ್ಲಿಕ್, ಸೆಕ್ಟಾರ್‌ನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ವರ್ಷವೊಂದಕ್ಕೆ ೮೩,೭೩೪ ರೂ. ಗಳನ್ನು, ಬ್ಯಾಂಕ್‌ಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ವರ್ಷವೊಂದಕ್ಕೆ ೮೩,೯೩೪ ರೂ.ಗಳನ್ನು ಪ್ರೈವೇಟ್ ಸೆಕ್ಟಾರ್‌ನಲ್ಲಿ ಕೆಲಸಮಾಡುತ್ತಿರುವ ಅಧಿಕಾರಿಗಳು ವರ್ಷವೊಂದಕ್ಕೆ ೨,೨೮,೩೫೦ ರೂ.ಗಳನ್ನು ಸಂಬಳ ರೂಪದಲ್ಲಿ ಪಡೆಯುತ್ತಿದ್ದಾರೆ. ಮತ್ತೊಂದು ಕಡೆಯಲ್ಲಿ ಒಂದು ಹೊತ್ತಿನ ಕೂಳಿಗೂ ಗತಿ ಇಲ್ಲದಿರುವಂತಹ ಜನರೂ ಇದ್ದಾರೆ. ಸರ್ಕಾರದವರು ಈ ಒಂದು ಅಂತರವನ್ನು ಕಡಿಮೆ ಮಾಡಲು ಲ್ಯಾಂಡ್ ಸೀಲಿಂಗ್ ತಂದರು. ಇನ್‌ಕಮ್ ಮೇಲೆ ಸೀಲಿಂಗ್ ತಂದರು, ಸರ್‌ಚಾರ್ಜ್ ತೆಗೆದುಕೊಂಡು ಬಂದರು, ಒಟ್ಟಿನಲ್ಲಿ ಎಂತಹ ಸೀಲಿಂಗ್ ತಂದರೂ ಸಹ ನಮ್ಮ ದೇಶದಲ್ಲಿ ಬಡವರು ಇನ್ನೂ ಬಡವರಾಗು ತ್ತಿದ್ದಾರೆ. ಹಣವಂತರು ಇನ್ನೂ ಹಣವಂತರಾಗುತ್ತಿದ್ದಾರೆ ಕೇವಲ ೮-೯ ವರ್ಷಗಳಲ್ಲಿ ಇಂಡಿಯಾ ದೇಶದಲ್ಲಿರತಕ್ಕಂಥ ೨೦ ಜನರು ತಮ್ಮ ಆಸ್ತಿಯನ್ನು ನೂರು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಮಾಡಿ ಕೊಂಡಿದ್ದಾರೆ. ಇದನ್ನು ತಾವೂ ಸಹ ಒಪ್ಪುತ್ತೀರಿ. ೧೯೬೩-೬೪ರಲ್ಲಿ ಕೇವಲ ೫೭ ಕೋಟಿ ರೂಪಾಯಿ ಗಳಷ್ಟು ಆಸ್ತಿಯನ್ನು ಹೊಂದಿದ್ದವರು ಈಗ ೧೧೬೪ ಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಹೊಂದಿ ದ್ದಾರೆ. ಈ ರೀತಿಯಾದರೆ ನಾವು ಬಡತನವನ್ನು ಹೋಗಲಾಡಿಸುವುದು ಹೇಗೆ? ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಆದರೆ ಅದರಿಂದ ನಾವು ನಿರೀಕ್ಷೆ ಮಾಡಿದಷ್ಟು ಫಲ ದೊರೆಯಲಿಲ್ಲ. ಸೊಸೈಟಿಗಳಲ್ಲಿ ಹಣ ಸಾಲ ಪಡೆಯುವುದೇ ಕಷ್ಟವಿರುವಾಗ ಇನ್ನು ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಸಾಮಾನ್ಯ ಜನರಿಗೆ ಯಾರು ಜಾಮೀನು ಕೊಡುತ್ತಾರೆ? ನಮ್ಮ ರಾಜ್ಯದಲ್ಲಿ ಬಸ್ ರೂಟ್‌ಗಳನ್ನು ರಾಷ್ಟ್ರೀ ಕರಣ ಮಾಡಿದ್ದನ್ನೇ ತೆಗೆದುಕೊಂಡರೂ ಸಹ, ಇದರಲ್ಲಿ ನೀವು ಹೇಳುದಿದ್ದರೂ ಸಹ ಫೇಲ್ ಆಗಿದ್ದೀರಿ. ಬಸ್‌ಗಳು ಸಾಕಷ್ಟು ಇಲ್ಲವೆನ್ನುವ ಬಗ್ಗೆ ಜನರಿಂದ ಹೊಡೆತ ಜಾಸ್ತಿಯಾಗುತ್ತಿದೆ. ಈ ಕಾರಣದಿಂದ ರೂಟ್‌ಗಳನ್ನು ಏತಕ್ಕೆ ಹರಾಜು ಹಾಕಬಾರದು ಎಂದು ಕೇಳುವುದಕ್ಕೆ ಹೊರಟಿದ್ದೀರಿ.

ರಾಷ್ಟ್ರೀಕರಣ ಮಾಡಿದರೆ ಸಾಕಷ್ಟು ವೇಗದಲ್ಲಿ ಬೇಕಾದ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ. ಪ್ರೈವೇಟ್ ಸೆಕ್ಟಾರಿಗೆ ಬಿಟ್ಟರೆ ಬಡವ ಬಲ್ಲಿದರ ಮಧ್ಯೆ ಅಂತರ ಜಾಸ್ತಿಯಾಗುತ್ತೆ ಆದ್ದರಿಂದ ಸಮಾಜ ವಾದವನ್ನು ದೇಶದಲ್ಲಿ ಜಾರಿಗೆ ತರಬೇಕು ಈ ಸಮಾಜವಾದವನ್ನು ಸಹಕಾರ ತತ್ವದ ಮೇಲೆ ಜಾರಿಗೆ ತರಬೇಕು. ಸಹಕಾರ ತತ್ವಗಳ ಮೇಲೆ ಹೊಸ ಸಮಾಜ ರಚನೆಯಾಗಬೇಕು. ಅದು ಸರ್ಕಾರದಿಂದಲೇ ಸಾಧ್ಯವಾಗುವುದಿಲ್ಲ. ಅದು ಎಲ್ಲಾ ಕಡೆಗಳಿಂದಲೂ ಬರಬೇಕು. ಆಗ ಸಹಕಾರ ತತ್ವಕ್ಕೆ ನಿಜವಾದ ಮಾಹಿತಿ ಸಿಕ್ಕುತ್ತದೆ. ಸೊಸೈಟಿಗಳು ಚೆನ್ನಾಗಿ ಕಾರ್ಯವನ್ನು ನಿರ್ವಹಿಸುವುದರಲ್ಲಿ ಫೈಲ್ ಆಗಿರುವುದಕ್ಕೆ ಕಾರಣ ವೇನು ಎನ್ನುವ ಬಗ್ಗೆ ನನಗೆ ತಿಳಿದಿರುವ ಒಂದೆರಡು ವಿಚಾರಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇದರ ಬಗ್ಗೆ ಯಾರಿಗೂ ಉದ್ರೇಕ ಬೇಕಾಗಿಲ್ಲ. ನನ್ನ ಕಳಕಳಿ ಏನೆಂದರೆ

ಸರಕಾರದವರು ಸಹಕಾರ ಸಂಘಗಳನ್ನು ಪೊಲಿಟಿಕಲೈಜ್ ಮಾಡುತ್ತಿದ್ದಾರೆ ಇದು ಮೊದಲನೆಯ ದೋಷ. ಅದನ್ನು ಕಿತ್ತುಹಾಕಬೇಕು. ಸಹಕಾರ ಸಂಘಗಳು ರಾಜಕೀಯದಿಂದ ದೂರ ಇಡದಿದ್ದರೆ ಎಷ್ಟು ಸಾವಿರ ವರ್ಷಗಳಾದರೂ ಕೂಡ ನಿಜವಾದ ಸಹಕಾರ ಚಳವಳಿ ಯಶಸ್ವಿಯಾಗಿ ನಡೆಯಲಾರದು. ಡೀಪೊಲಿಟಿಕಲೈಜೇಷನ್ ಎಂದರೇನು? ಆದರೆ ಇವೊತ್ತು ಏನು ನಡೆಯುತ್ತಿದೆ ? ಎಲ್ಲಿ ನೋಡಿದರೂ ಯಾವ ಸೊಸೈಟಿಯಲ್ಲಿ ನೋಡಿದರೂ ರಾಜಕೀಯ ಕೈವಾಡ ಇದ್ದೇ ಇರುತ್ತದೆ. ಇವೊತ್ತು ನಾನು ನೊಂದ ಮನಸ್ಸಿನಿಂದ ಹೇಳಬೇಕಾದರೆ ನಿಜವಾಗಿ ಸಹಕಾರ ಸಂಘಗಳಲ್ಲಿ ರಾಜಕೀಯ ಕೈವಾಡವನ್ನು ತಪ್ಪಿಸಬೇಕು. ಇವೊತ್ತು ಸಹಕಾರ ಸಂಘಗಳಿಗೆ ಮ್ಯಾನೇಜಿಂಗ್ ಕಮಿಟಿಗೆ ಡೈರೆಕ್ಟರುಗಳನ್ನು ನಾಮಿನೇಷನ್ ಮಾಡುವಾಗ ತಮ್ಮ ಪಕ್ಷದವರನ್ನು ಹುಡುಕಿಸಿ ಕಾಂಗ್ರೆಸ್ ಆಫೀಸಿನಿಂದ ಬ್ಲಾಕ್ ಕಮಿಟಿಗಳಿಂದ ರೆಕ್‌ಮೆಂಡೇಷನ್ ಮಾಡಿಸಿ ಹೆಸರುಗಳನ್ನು ತರಿಸುತ್ತಾರೆ. ಅವರಿಗೆ ಸಹಕಾರ ತತ್ವ ಗೊತ್ತಿದೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡುವುದಿಲ್ಲ. ಯಾರ ಹೆಸರು ಬರುತ್ತದೆಯೋ ಅವರನ್ನು ನಾಮಕರಣ ಮಾಡುತ್ತಾರೆ. ಸಹಕಾರ ತತ್ವದಲ್ಲಿ ನಂಬಿಕೆ ಇಲ್ಲದವರನ್ನೂ ನಾಮಿನೇಷನ್ ಮಾಡುತ್ತೀರಿ

ಶ್ರೀ ಜಿ. ಬಿ. ಶಂಕರರಾವ್:—ನೀವು ಅದನ್ನೇ ಮಾಡುತ್ತಿದ್ದೀರಿ, ನಾವು ಅದನ್ನೇ ಮಾಡುತ್ತಿದ್ದೆವು.

ಶ್ರೀ ವೈ. ರಾಮಕೃಷ್ಣ:—ತಪ್ಪು ತಪ್ಪೇ. ಯಾರು ಅದನ್ನು ಮಾಡಿದರೂ ಅದು ತಪ್ಪೇ. ೨೨ ಸಾವಿರ ಸೊಸೈಟಿಗಳಿಗೆ ನಾಮಿನೇಷನ್ ಸದಸ್ಯರನ್ನು ತುಂಬಬೇಕಾದರೆ ಎಷ್ಟು ದೊಡ್ಡ ಸೈನ್ಯಬೇಕು, ಅದನ್ನು ಎಲ್ಲಿಂದ ತರುತ್ತೀರಿ? ಎಲ್ಲರು ಸಹಕಾರಿಗಳೇ? ಎಲ್ಲರೂ ವಿದ್ಯಾವಂತರೇ? ಎಲ್ಲರೂ ದೇಶಾಭಿಮಾನಿಗಳೇ? ಎಲ್ಲರೂ ರಾಷ್ಟ್ರಭಕ್ತರೇ? ಆದರೆ ಈ ನೆಪದಲ್ಲಿ ತಮ್ಮ ರಾಜಕೀಯ ಪಾರ್ಟಿ ಬೆಳೆಸಬೇಕು. ಅಧಿಕಾರದಲ್ಲಿರಬೇಕು ಎಂದು ಹೇಳಿದರೆ ಹೇಗೆ? ನಾಮಕರಣ ಹೊಂದಿದ ಸದಸ್ಯರು ಸೊಸೈಟಿಗಳಲ್ಲಿ ಇಂಪಾರ್ಷಿಯಲ್ ಆಗಿ ನಡೆದುಕೊಳ್ಳಿ ಎಂದು ಹೇಳಿದರೆ ಅವರು ಹೇಗೆ ನಡೆದುಕೊಳ್ಳುತ್ತಾರೆ? ಅವರು ಮಂತ್ರಿಗಳು ಹೇಳಿದ ಹಾಗೆ ತಮ್ಮ ಪಕ್ಷದ ರಾಜಕೀಯ ಧುರೀಣರು ಹೇಳಿದ ಹಾಗೆ ಕೇಳಬೇಕಾಗುತ್ತದೆ ಈ ರೀತಿ ಮಾಡಿದರೆ ಇವರು ಸಹಕಾರಿ ಚಳವಳಿಯನ್ನು ಯಾವ ರೀತಿ ಬೆಳೆಸುತ್ತಾರೆ? ಸೊಸೈಟಿಗಳಲ್ಲಿ ಜನಗಳ ಸೇವೆಯನ್ನು ಮಾಡುವುದರ ಬಗ್ಗೆ ಚರ್ಚೆಮಾಯವಾಗಿ ತಮ್ಮ ಎದುರಾಳಿಗಳನ್ನು ಯಾವ ರೀತಿ ಸದೆ ಬಡಿಯಬೇಕು ಎನ್ನುವ ಮನೋಭಾವನೆ ಬರುತ್ತದೆ. ಅಧಿಕಾರಿಗಳನ್ನೇನು ಈ ಸೊಸೈಟಿಗಳಿಗೆ ನೇಮಕ ಮಾಡುತ್ತಾರೆ ಅವರು ಅಧಿಕಾರದಲ್ಲಿರುವವರ ಹಿತಾಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ದುಡಿಯಬೇಕು, ಮಂತ್ರಿಮಂಡಲದ ಹಿತಾಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ದುಡಿಯಬೇಕು, ಎನ್ನುವ ಮನೋಭಾವನೆ ಹೊಂದಿರುವವರಾಗುತ್ತಾರೆ. ಸೊಸೈಟಿಗಳ ಉದ್ಧಾರಕ್ಕಾಗಲೀ ಸಮಾಜದ ಉದ್ಧಾರಕ್ಕಾಗಲೀ ದುಡಿಯಬೇಕು ಎನ್ನುವ ಭಾವನೆ ಅವನಲ್ಲಿ ಎಲ್ಲಿ ಬರುತ್ತದೆ? ಅದು ಖಂಡಿತಾ ಬರುವುದಿಲ್ಲ ಅಧಿಕಾರಿಗಳನ್ನು ಸೊಸೈಟಿಗಳಿಗೆ ನೇಮಕಮಾಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಏತಕ್ಕೆಂದರೆ ಸೊಸೈಟಿಗಳಲ್ಲಿ ಸರಕಾರದವರು ಹಣ ಹಾಕಿದ್ದರೆ. ಅದನ್ನು ಹಾಕಬಾರದಾಗಿತ್ತು. ಸರ್ಕಾರದವರು ಹಣವನ್ನು ಹಾಕಿರುವುದರಿಂದ ಅದನ್ನು ಕಾಯುವುದಕ್ಕೆ ಅಧಿಕಾರಿಗಳನ್ನು ನಾಮಿನೇಟ್ ಮಾಡಿರುತ್ತಾರೆ. ಇವರು ಅಧಿಕಾರಿಗಳನ್ನು ಸೊಸೈಟಿಗಳಿಗೆ ನಾಮಿನೇಟ್ ಮಾಡಿ ಅವರ ಕೈಯಲ್ಲಿ ರಾಜಕೀಯ ಮಾಡಿಸುತ್ತಾರೆ ಇವರು ನಿಜವಾದ ಸಹಕಾರಿಗಳಿಗೆ ಬೆಂಬಲ ಕೊಡುವುದಿಲ್ಲ ಈ ಸೊಸೈಟಿಗಳಿಗೆ ಕಾರ್ಯಕಾರಿ ಮಂಡಲಿಗೆ ಸದಸ್ಯರನ್ನು ಎಲೆಕ್ಷನ್ ಮಾಡುವ ಬಗ್ಗೆ ಬಿಲ್ಲು ತಂದರೆ ನಾವು ಖಂಡಿತವಾಗಿ ಕೈ ಎತ್ತುತ್ತೇವೆ ಈ ದೃಷ್ಟಿಯಿಂದ ಸೊಸೈಟಿಗಳು ಪೊಲಿಟಿಕಲೈಜ್ ಆಗಬಾರದು. ಯಾವಾಗ ಈ ಸೊಸೈಟಿಗಳಲ್ಲಿ ಅಧಿಕಾರಿಗಳನ್ನು ನೇಮಕ ಮಾಡುತ್ತಾರೆ ಅದರ ಮೂಲ ಉದ್ದೇಶ ಸರ್ಕಾರದ ಹಿತವನ್ನು ಕಾಪಾಡುವುದಕ್ಕೆ ಎಂಬ ತತ್ವವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

SRI V. M. KUSNOOR (Minister for Co-operation):–Sir I am ready to accept the proposition of the hon. Member provided all over India all the parties agree that there should not be any nominations. He should say the same thing to others and see that it happeus in other State also.

SRI Y. RAMAKRISHNA: I made my point abundantly clear that these institutions must be depoliticalised. ನೀವು ಮಾತ್ರ ಮಾಡಿ ಬೇರೆಯವರು ಮಾಡುವುದು ಬೇಡ ಎಂದಲ್ಲ, ಸಹಕಾರ ತತ್ವ ಯಾವುದೇ ಪಾರ್ಟಿಯಾಗಲಿ: ಎಲ್ಲಾ ಪಾರ್ಟಿಗೂ ಅನ್ವಯಿಸುತ್ತದೆ.

SRI A. LAKSHMISAGAR:—Co-operation is a State subject under the Constitution and it need not depend upon the instructions that are issued from the Central Government on the manner in which the Co-operative Department should function. It is quite desirable that there must be an all-India policy governing the conduct of the Co-operative societies, but then it need not be dependent upon the all-India pattern to emerge since it is a subject which is exclusively under the States jurisdiction under the Constitution. Therefore, it cannot be lame excuse for postponing of a particular policy being applied so that the societies may function on a better footing, a sounder footing it may subserve the interests of the common people.

ಶ್ರೀ ವೈ. ರಾಮಕೃಷ್ಣ:—ಇದಕ್ಕೆ ಒಂದು ಗಾದೆ ಹೇಳುತ್ತಾರೆ. ''ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂದಹಾಗೆ.'' ಆದ್ದರಿಂದ ಈ ತತ್ವದ ವಿಚಾರದಲ್ಲಿ ನಾವು ಬೇರೆ ನೀವು ಬೇರೆ ಎಂದು ಆಗುವುದಕ್ಕೆ ಸಾಧ್ಯವಿಲ್ಲ ಎಲೆಕ್ಷನ್ ಅತ್ಯಾವಶ್ಯಕ ಅದನ್ನು ಬಿಟ್ಟರೆ ಅನ್ಯಮಾರ್ಗವಿಲ್ಲ ಎಂಬ ತತ್ವ ಜಾರಿಗೆ ಬರಲಿ ಆಗ ಸರಿಹೋಗುತ್ತದೆ. ಈ ಸರ್ಕಾರದಿಂದ ನಾಮಕರಣ ಮಾಡಲ್ಪಟ್ಟ ಸದಸ್ಯರುಗಳು ತಮ್ಮ ಎದುರು ಪಾರ್ಟಿಯವರಿಂದ ಜನತಾ ಪಾರ್ಟಿಯವರನ್ನು ಯಾವರೀತಿ ಸದೆಬಡಿಯಬೇಕು, ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ ಎಂದು ಯೋಚನೆ ಮಾಡುತ್ತಾರೆ. ಈ ಕಾರ್ಯಸಾಧನೆಗೆ ಹಣಬೇಕು. ಆ ಹಣವನ್ನು ಎಲ್ಲಿಂದ ತರುತ್ತಾರೆ? ಸೊಸೈಟಿಗಳ ಹಣವನ್ನು ಖರ್ಚು ಮಾಡುತ್ತಾರೆ. ಇದಕ್ಕೆ ಅಧಿಕಾರಿಗಳ ಒಪ್ಪಿಗೆಯೂ ಸಿಕ್ಕುತ್ತದೆ. ಪ್ರೆಸಿಡೆಂಟ್‌ರ ಒಪ್ಪಿಗೆಯೂ ಸಿಕ್ಕುತ್ತದೆ ಮೆಜಾರಿಟಿ ಎಲ್ಲರ ಒಪ್ಪಿಗೆಯೂ ಸಿಕ್ಕುತ್ತದೆ.

ಹೇಗೋ ಮಾಡುತ್ತಾರೆ. ಮಾಡುವುದು ಹೇಗೆ ಎನ್ನುವುದು ನಿಮಗೂ ಗೊತ್ತಿದೆ, ಅದನ್ನು ಅವರು ಉಪಯೋಗಿಸುತ್ತಾರೆ, ಕಳ್ಳ ಲೆಕ್ಕ ಸೃಷ್ಟಿ ಮಾಡುತ್ತಾರೆ. ಭ್ರಷ್ಟಾಚಾರದ ಮೂಲ ಅಲ್ಲಿ ಪ್ರಾರಂಭವಾಗುತ್ತದೆ. ರಾಜಕಾರಣಿಗಳು ತಮ್ಮ ಸ್ಥಾನಮಾನಗಳನ್ನು ನಿರ್ಮಿಸಿಕೊಳ್ಳಲಿಕ್ಕೆ ಇದು ಒಂದು ಸೋಪಾನವಾಗುತ್ತದೆ, ಇದನ್ನು ತಪ್ಪಿಸುವುದಕ್ಕೆ ಏನೆಲ್ಲಾ ಪ್ರಯತ್ನಗಳನ್ನು ಮಾಡಬೇಕೊ ಅದನ್ನೆಲ್ಲಾ ಮಾಡಿ. ನನಗೆ ತಿಳಿದದ್ದು ನಾನು ಹೇಳುತ್ತೇನೆ, ನಿಮಗೆ ತಿಳಿದದ್ದು ನೀವು ಹೇಳಿ. ಇದು ಮೊದಲನೆ ಶತ್ರು. ಎರಡನೇ ಶತ್ರು ಎಂದರೆ, ಡಿ ಅಫಿಷಿಯಲೈಸೇಷನ್ ಅಧಿಕಾರಿಗಳಿಂದ ಸೊಸೈಟಿಯನ್ನು ದೂರ ಮಾಡಿ. ಅಧಿಕಾರಿಗಳ ಸಂಖ್ಯೆ ಜಾಸ್ತಿ ಇದ್ದಷ್ಟು ಕ್ಷೇಮವಲ್ಲ, ಅದು ಸಹಕಾರಿ ತತ್ವಕ್ಕೆ ವಿರೋಧವಾದುದು. ಸರ್ಕಾರದ ಹಣದಿಂದ ಸರ್ಕಾರಿ ಅಧಿಕಾರಿಗಳು ಮೂವ್‌ಮೆಂಟ್ ಬೆಳಸಲಿಕ್ಕೆ ಸಾಧ್ಯವಾಗುತ ದೆ ಎಂದು ತಾವೇನಾದರೂ ತಿಳಿದುಕೊಂಡಿದ್ದರೆ, You are in utopia. ಅದು ಕನಸಿನ ರಾಜ್ಯವಾಗುತ್ತೆ. ಅದು ಸಹಕಾರ ತತ್ವಕ್ಕೆ ಮೊದಲನೆ ವಿರೋಧ ತಾವು ಒಪ್ಪುತ್ತೀರಿ, ಅವರನ್ನು ನಾವು ಯಾವ ರೀತಿ ಬೇರ್ಪಡಿಸಬೇಕು ಎನ್ನುವುದೂ ಕೂಡ ಅಷ್ಟೇ ಪ್ರಾಮುಖ್ಯವಾದಂಥ ಒಂದು ಸಮಸ್ಯೆ. ಈ ವಿಚಾರದಲ್ಲಿ ನಾನು ಹೇಳುವುದಾದರೆ, ಇದಕ್ಕೆ ಒಂದು ವಿಶೇಷವಾದಂತ ದಳವನ್ನು ನಾವು ಸೃಷ್ಟಿಮಾಡಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್‌ನಿಂದ ನೇಮಿತವಾದ ಒಂದು ವಿಶೇಷವಾದ ದಳವನ್ನು ಸೃಷ್ಟಿಮಾಡಬೇಕು. From Registrar upto Inspectorರ ತನ ಸಹಕಾರ ತತ್ವವನ್ನು ಒಪ್ಪಿ; ಸಹಕಾರ ತತ್ವದಿಂದಲೇ ದೇಶಕಟ್ಟಬಹುದೆಂಬ ತತ್ವದಲ್ಲಿ ಸಂಪೂರ್ಣ ನಂಬಿಕೆ ಇಟ್ಟಿರುವವರನ್ನು ಮತ್ತು ಸಹಕಾರದ ಎಲ್ಲಾ ಕಾನೂನುಗಳನ್ನು ಬಲ್ಲವರನ್ನು ಇದಕ್ಕಿಂಥ ಹೆಚ್ಚಾಗಿ ಬಡವರ ವಿಚಾರದಲ್ಲಿ ಅನುಕಂಪವುಳ್ಳಂಥ ಅಧಿಕಾರಿಗಳನ್ನು ಮಾತ್ರ ಈ ಡಿಪಾರ್ಟ್‌ಮೆಂಟಿಗೆ ಸೆಲೆಕ್ಟ್ ಮಾಡುವ ವಾತಾವರಣ ಕಲ್ಪಿಸಿರಿ. ಪೊಲಿಟಿಕಲೈಸೇಷನ್ ಆಗುವುದಕ್ಕೆ ಪ್ರಮುಖವಾದ ಒಂದೆರಡು ವಿಚಾರಗಳಿವೆ, ಅವುಗಳನ್ನು ಹೇಳಿದಾಗ ತಾವು

ಬೇಜಾರು ಪಟ್ಟುಕೊಳ್ಳುತ್ತೀರಿ. ತಮ್ಮ ಇಲಾಖೆಯ ಅಧಿಕಾರಿಗಳು ಅವರ ದಬ್ಬಾಳಿಕೆಯಲ್ಲಿ ರೆವಿನ್ಯು ಇಲಾಖೆಯ ಅಧಿಕಾರಿಗಳನ್ನೂ ಮೀರಿಸಿದ್ದಾರೆ; ನಿಮ್ಮ ಇಲಾಖೆಯಲ್ಲಿರತಕ್ಕ ಜನ ಪೋಲೀಸ್ ಇಲಾಖೆಯನ್ನೂ ಕೂಡ ಮೀರಿಸಿದ್ದಾರೆ ಎನ್ನುವುದನ್ನು ತಾವು ಮರೆಯಬೇಡಿ. ದೇರ್ಪದಲ್ಲಿ ಅವರೇನೂ ಕಡಿಮೆ ಪರ್ಸನಲ್ಲಾಗಿ ರಿಜಿಸ್ಟ್ರಾರ್ ಯಾರು, ಅಸಿಸ್ಟೆಂಟ್ ರಿಜಿಸ್ಟ್ರಾರ್ ಯಾರು ಎಂದು ನನಗೆ ಗೊತ್ತಿಲ್ಲ. I have not met nor see them but I have read in the newspapers and

I have heard from others. ಮಂತ್ರಿಗಳು ಒಂದು ಗಾಡಿ ಹೂವಿನಹಾರ ಹಾಕಿಸಿಕೊಂಡರೆ ನಿಮ್ಮ ಕೋ ಅಪರೇಟಿವ್‌ನ ರಿಜಿಸ್ಟ್ರಾರ್ ಕೊನೇಪಕ್ಷ ೩ಗಾಡಿಯಾದರೂ ಹೂವಿನಹಾರ ಹಾಕಿಸಿಕೊಳ್ಳಬೇಕು. ಇದನ್ನೆಲ್ಲಾ ನಾನು ಪೇಪರಿನಲ್ಲಿ ನೋಡಿದ್ದೇನೆ. ಇವರುಇ ದಷ್ಟು ಸಹಕಾರಿಯಾಗಿ ತನ ಕೈಕೆಳಗೆ ಇರತಕ್ಕ ಅಧಿಕಾರಿಗಳಿಗೆ ಒಂದು ಮಾದರಿಯಾಗಿ ಇರಬೇಕು. ಅದನ್ನು ಬಿಟ್ಟು ಇವರೇನೇ ಮಾಲೆ ಮಾಡಿಸಿಕೊಂಡು, ಹೂವಿನಹಾರ ಹಾಕಿಸಿಕೊಂಡು ಮಂತ್ರಿಗಳ ರೀತಿ ಬ್ಯಾಂಡ್ ಮಾಡಿಸಿಕೊಂಡು ಬೀದಿಯಲ್ಲಿ ಮೆರವಣಿಗೆ ಮಾಡಿಸಿಕೊಂಡರೆ ಕೋ ಅಪರೇಟಿವ್ ಮೂವ್‌ಮೆಂಟನ್ನು ಬೆಳಸತಕ್ಕಂಥಾದ್ದು ಹೇಗೆ ಎನ್ನುವುದನ್ನು ತಾವು ಸ್ವಲ್ಪ ಆಲೋಚನೆಮಾಡಿ. ತಾವು ಕೂಡ ಸರ್ಕ್ಯುಲರ್ ಕೊಟ್ಟಿರಬಹುದು ಎಂದು ಕಾಣಿಸುತ್ತದೆ. ಅವರೂ ಕೂಡ He should identify himself as one of the co-operators. ಇವತ್ತು ನೇಗಿಲಯೋಗಿ ಜೊತೆಯಲ್ಲಿ ತಾನೂ ನೇಗಿಲಯೋಗಿಯಾಗಿ, ಒಬ್ಬ ಸಣ್ಣ ವ್ಯಾಪಾರಿ ಜೊತೆಯಲ್ಲಿ ತಾನೂ ವ್ಯಾಪಾರಿಯಂತೆ, ಸಣ್ಣ ಪುಟ್ಟ ಕೈಕಸುಬು ಮಾಡಮಾಡುವವರ ಜೊತೆಯಲ್ಲಿ ತಾನೊಬ್ಬ ಸಹಪಾಠಿಯಾಗಿ ಬಡವನಿಗೆ ಸಹಾಯ ಮಾಡಬೇಕೇ ಹೊರತು ಆಡಂಬರವನ್ನು ತೋರ್ಪಡಿಸುವುದು ಸರಿಯಲ್ಲ; ಇದು ಒಂದು ಇಲಾಖೆಗೆ ಶೋಭಾಯಮಾನವಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ ಮತ್ತೊಂದು ವಿಚಾರವೆಂದರೆ, ಕಾನೂನು ತಿಳಿದುಕೊಳ್ಳದೇ ಇರತಕ್ಕಂಥ ಅಧಿಕಾರಿಗಳು ನಿಮ್ಮ ಇಲಾಖೆಯಲ್ಲಿ ಬಹುಸಂಖ್ಯೆಯಲ್ಲಿದ್ದಾರೆ. ಅವರ ಪರ್ಸೆಂಟೇಜ್ ನನಗೆ ಗೊತ್ತಿಲ್ಲ, ಮಾನ್ಯ ಮಂತ್ರಿಗಳಿಗೆ ಗೊತ್ತಿರಬಹುದು ಕೋಅಪರೇಟಿವ್‌ನ ಸೊಸೈಟಿ ಆಕ್ಟ್, ಕೋಅಪರೇಟಿವ್ ಸೊಸೈಟಿ ರೂಲ್ಸ್ ಬೈಲಾ ಮತ್ತು ಕೋಅಪರೇಟಿವ್ ಸೊಸೈಟಿ ಸರ್ಕ್ಯುಲರ್ಸ್–ಇವುಗಳನ್ನು ಪೂರ್ತಿಯಾಗಿ ಮನನ ಮಾಡಿಕೊಂಡು ಕೆಲಸಮಾಡತಕ್ಕಂಥ ಅಧಿಕಾರಿಗಳ ಸಂಖ್ಯೆ ಬಹಳ ಕಡಿಮೆ ಇದೆ. ತಾವು ಇದರ ಬಗ್ಗೆ ಆಲೋಚನೆಮಾಡಿ ಒಂದು ಹೊಸ ದಳವನ್ನು ಮಾಡಬೇಕು. ಕೆಲವಾರು ತತ್ವಗಳನ್ನು ಅನುಸರಿಸಿ ವಿಶೇಷ ಸಿಬ್ಬಂದಿಯನ್ನು ಅಪಾಯಿಂಟ್ ಮಾಡುವುದಾದರೆ ಇದರಿಂದ ಏನಾದರೂ ಸಾಧ್ಯವಾದೀತೆಂದು ನನ್ನಗನಿಸುತ್ತದೆ, ಇದು ಎರಡನೆಯದು. ಮೂರನೆಯ ಸಲಹೆ ಎಂದರೆ, There should be a strong Enquiry and Inspection Wing. ಎನ್‌ಕ್ವೈರಿ ಮತ್ತು ಇನ್ಸ್‌ಪೆಕ್ಷನ್ ವಿಂಗ್ ಎಷ್ಟು ಬಲಹೀನವಾಗಿರಬೇಕೊ ಅಷ್ಟೊಂದು ಬಲಹೀನವಾಗಿದೆ. ಅದು ಯಶಸ್ವಿಯಾಗಿ ಕೆಲಸ ಮಾಡುವುದಾದರೆ ಇಂತಹ ಸಮಸ್ಯೆಗಳು ಬರುವುದಿಲ್ಲ. ಯಾರಾದರೂ ತಮ್ಮ ಕರ್ತವ್ಯದಲ್ಲಿ ಲೋಪಮಾಡಿದಾಗ ಮಿಸ್ ಅಪ್ರೊಪ್ರಿಯೇಷನ್ ಮುಂತಾದ ಅವ್ಯವಹಾರ ನಡೆದಾಗ ಕೂಡಲೇ ಕ್ರಮ ಕೈಗೊಳ್ಳಬೇಕು. ಅದಕ್ಕೋಸ್ಕರ ಈ ಎನ್‌ಕ್ವೈರಿ ಮತ್ತು ಇನ್ಸ್‌ಪೆಕ್ಷನ್ ಡಿಪಾರ್ಟ್‌ಮೆಂಟಿನಲ್ಲಿ ದಕ್ಷತೆ ಇರತಕ್ಕ, ನಿಸ್ಪೃಹತೆಯಿಂದ ಕೆಲಸಮಾಡತಕ್ಕ, ಯಾವ ಸ್ವಜನಪಕ್ಷಪಾತಕ್ಕೂ ಒಳಗಾಗದೆ ಇರತಕ್ಕ, ಯಾವ ವಿಧವಾದ ಮಾಮೂಲು ಮಲಾಜುಗಳಿಗೂ ಒಳಗಾಗದೆ ಇರತಕ್ಕ ದಕ್ಷ ಅಧಿಕಾರಿಗಳನ್ನು ಹಾಕಿ ಅದರ ಹಿನ್ನಲೆಯಲ್ಲಿ ಕೋಅಪರೇಟಿವ್ ಮೂವ್‌ಮೆಂಟನ್ನು ಬೆಳಸುತ್ತೇವೆ ಎನ್ನುವಂತ ಕೆಚ್ಚು ಇರಬೇಕು. ಹಾಗಾದರೆ ಮಾತ್ರ ದುರುಪಯೋಗವನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ.

ನಾಲ್ಕನೆಯದು ಬಹಳ ಮುಖ್ಯವಾದುದು. ಪ್ರತ್ಯೇಕ ಇಂಡಿಪೆಂಡೆಟ್ ಆಡಿಟ್. ತಾವು ಈಗ ಇದನ್ನು ಮಾಡಿದ್ದೇವೆ ಎಂದು ಹೇಳಿದ್ದೀರಿ. ೧೯೬೬–೬೭ನೇ ಇಸವಿಯ ಆಡಿಟ್ ರಿಪೋರ್ಟ್‌ನ್ನು ನಾನು ನೋಡಿದೆ. ೧೯೬೬–೬೭ರ ಆಡಿಟ್ ರಿಪೋರ್ಟಿನಲ್ಲಿ ೨೧,೬೬೧ ಸೊಸೈಟಿಗಳ ಪೈಕಿ ೭,೬೩೧ ಸೊಸೈಟಿಗಳ ಆಡಿಟ್ ನಡೆದಿದೆ ಅಂದರೆ ಕೇವಲ ೩೪ ಪರ್ಸೆಂಟ್ ಸೊಸೈಟಿಗಳ ಆಡಿಟ ನಡೆದಿದೆ. ಉಳಿದಿರತಕ್ಕ ಸೊಸೈಟಿಗಳ ಆಡಿಟ್‌ನ್ನು ಇವರ ಕೈಯಲ್ಲಿ ಮಾಡಲಿಕ್ಕೆ ಆಗಲಿಲ್ಲ. ಹೀಗೆ ಆಡಿಟ್ ಮಾಡುವುದನ್ನು ಉಳಿಸಿದರೆ ಮುಂದಿನ ವರ್ಷಕ್ಕೆ ೬೬% ಆಗುತ್ತದೆ. ಎರಡನೇ ವರ್ಷಕ್ಕೆ ಇನ್ನೂ ಹೆಚ್ಚಾಗುತ್ತವೆ, ಮೂರನೇ ವರ್ಷಕ್ಕೆ ಆಡಿಟ್ ಮಾಡುವುದಕ್ಕೇ ಆಗುವುದಿಲ್ಲ. ಆದಕ್ಕೋಸ್ಕರ ತಾವು ಕಟ್ಟಾಜ್ಞೆ ಮಾಡಬೇಕು ಆಯಾ ವರ್ಷದ ಆಡಿಟ್‌ನ್ನು ಜನರಲ್ ಬಾಡಿ ಮೀಟಿಂಗ್ ಮುಗಿಯುವುದಕ್ಕೆ ಮುಂಚೆ

ಮಾಡಲೇಬೇಕು. ತಪ್ಪಿದಲ್ಲಿ ಏನೇನು ಉಗ್ರಕ್ರಮ ಕೈಗೊಳ್ಳಬಹುದೆಂದು ತಮಗೆ ಗೊತ್ತಿದೆ ಅದೆಲ್ಲವನ್ನೂ ಮಾಡಿರಿ. ಈ ರೀತಿ ಕರಾರುವಕ್ಕಾಗಿ ಆಡಿಟ್‌ಮಾಡಿ, ಜನರಲ್‌ಬಾಡಿ ಮೀಟಿಂಗ್ ನಡೆಸಲೇಬೇಕು ಎಂದು ಕಟ್ಟಾಜ್ಞೆ ಮಾಡಿ. ಹೀಗೆ ನಾಲ್ಕು ಸಲಹೆಗಳನ್ನು ನಾನು ಕೊಟ್ಟಿದ್ದೇನೆ. ಇನ್ನು ನಿಮ್ಮ ಕೆಲವಾರು ಸೊಸೈಟಿಗಳು ಯಾವರೀತಿ ಕೆಲಸಮಾಡುತ್ತಿವೆ ಎಂದು ಒಂದೆರಡು ನಿದರ್ಶನಗಳನ್ನು ಕೊಡುತ್ತೇನೆ.

4-30 ಪಿ.ಎಂ.

ಕೆಲವೊಂದು ನಿದರ್ಶನಗಳನ್ನು ಮಾತ್ರ ಕೊಡುತ್ತೇನೆ ಯಾರ ಮೇಲೂ ದುರುದ್ದೇಶದಿಂದ ಈ ನಿದರ್ಶನಗಳನ್ನು ಕೊಡುತ್ತಿಲ್ಲ. ಇಲ್ಲಿ ಕೆಲವಾರು ಸೊಸೈಟಿಗಳನ್ನು ಸೆಲೆಕ್ಟ್ ಮಾಡಿದ್ದೇನೆ, ಆಫೀಸರ್ಸ್ ಕೋ ಆಪರೇಟಿವ್ ಸೊಸೈಟಿ ಮಾಡಿದರೆ ಹೇಗೆ ನಡೆಸುತ್ತಾರೆ ? ಪೋಲೀಸ್ ಡಿಪಾರ್ಟ್‌ಮೆಂಟಿನವರು ಮಾಡಿದರೆ ಹೇಗೆ ನಡೆಸುತ್ತಾರೆ ? ರಿಜರ್ವ್ ಬ್ಯಾಂಕಿನವರು ಮಾಡಿದರೆ ಹೇಗೆ ನಡೆಸುತ್ತಾರೆ ? ಇತ್ಯಾದಿಗಳು. ಈ ರೀತಿ ಯಾವ ಯಾವ ರೀತಿಯಲ್ಲಿ ಸೊಸೈಟಿಗಳು ನಡೆಯುತ್ತಿವೆ ಎನ್ನುವುದಕ್ಕೆ ತಮಗೆ ಹಲವಾರು ವಿಧವಿಧವಾದ ಸೊಸೈಟಿಗಳನ್ನು ಆರಿಸಿ ಹೇಳುತ್ತೇನೆ ತಾವು ಅದರ ಬಗ್ಗೆ ಆಲೋಚನೆ ಮಾಡಿ. ಅದು ಎಷ್ಟರಮಟ್ಟಿಗೆ ಸತ್ಯವಿದೆ, ಸುಳ್ಳು ಇದೆ ಎಂಬುದನ್ನು ತಾವು ಉತ್ತರ ಕೊಡುವಾಗ ಹೇಳಿ ಪರವಾಗಿಲ್ಲ. ಪ್ರಪ್ರಥಮವಾಗಿ ಪೌಲ್ಟ್ರಿ ಫಾರಂ ಸೊಸೈಟಿ, ಹೆಬ್ಬಾಳ್ – ಈ ಕ್ಷೇತ್ರವನ್ನು ನಾನು ಮೊದಲು ಪ್ರತಿನಿಧಿಸುತ್ತಿದ್ದೇ. ಇದು ಒಂದು ದೊಡ್ಡ ಕೋ ಆಪರೇಟಿವ್ ಸೊಸೈಟಿ. ವಿಧಾನ ಸೌಧದಿಂದ ಕೇವಲ ೩ ಮೈಲಿ ದೂರದಲ್ಲಿದೆ. ಶ್ರೀಮಾನ್ ಬಸವಲಿಂಗಪ್ಪನವರ ಕ್ಷೇತ್ರ ಕೂಡ ಅದೇ. ಅಲ್ಲಿ ಎಷ್ಟು ಲಕ್ಷ ಮಿಸ್ ಅಪ್ರೊಪ್ರಿಯೇಷನ್ ಆಗಿದೆ ? ಮಿಸ್ ಅಪ್ರೊಪ್ರಿಯೇಷನ್ ಎಷ್ಟೋ ಲಕ್ಷ ನಡೆದಿದೆ ? ಆ ಫಿಗರ್ಸ್ ಹೇಳಿದರೆ ನಾಳೆ ದಿವಸ ಆಡಿಟ್ ಆದಾಗ ಸ್ವಲ್ಪ ಹೆಚ್ಚು ಕಡಿಮೆ ಅಂಕೆ ಸಂಖ್ಯೆ ಇರಬಹುದು ಆಗ ರಾಮಕೃಷ್ಣ ಸುಳ್ಳು ಹೇಳಿದರು ಅಂತ ನೀವು ಹೇಳಬಹುದು. ಆದುದರಿಂದ ನನ್ನ ಹತ್ತಿರ ಅಂಕಿ ಸಂಖ್ಯೆಗಳು ಇದ್ದರೂ ಕೂಡ ನಾನು ಹೇಳುವುದಕ್ಕೆ ತಯಾರಾಗಿಲ್ಲ. ಇಷ್ಟು ಹಣ ಅಲ್ಲಿ ಲಾಸ್ ಆಗುವುದಕ್ಕೆ ಕಾರಣರ್‍ಯಾರು ? ಇದಕ್ಕೆ ಹೊಣೆಗಾರರು ಯಾರು ? ಇದರಲ್ಲಿ ಪ್ರತಿಯೊಬ್ಬ ನೌಕರರೂ ಕೂಡ ಇನ್‌ವಾಲ್ವ್ ಆಗಿದ್ದಾರೆ ಇದನ್ನು ತನಿಖೆ ನಡೆಸಿ ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅವರೊಂದು ವೆಹಿಕಲ್ ಇಟ್ಟಿದ್ದಾರೆ. ಆ ವೆಹಿಕಲ್ ರಿಪೇರಿಗೆ ವರ್ಷಂಪ್ರತಿ ಎಷ್ಟು ಸಾವಿರ ಕೊಡಬಹುದು ಎನ್ನುವ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ಒಂದು ಕಾರು ಕೊಂಡುಕೊಳ್ಳಬಹುದು ಅಷ್ಟು ಹಣವನ್ನು ಅಂದರೆ ೩೦, ೩೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ನಿಮ್ಮ ಸೊಸೈಟಿ ಆ್ಯಕ್ಟ್‌ನಲ್ಲಿ ಪ್ರಾವಿಜನ್ ಇದೆಯೇ ? ನಿಮ್ಮ ಆಫೀಸರ್‌ಗಳು ಕಣ್ಮುಚ್ಚಿಕೊಂಡಿದ್ದಾರೆಯೇ ? ರಿಜಿಸ್ಟ್ರಾರ್‌ರವರು ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ರವರು ಏನು ಮಾಡುತ್ತಿದ್ದರು ? ಕೇವಲ ಒಂದು ಬಸ್ಸಿಗೆ ರಿಪೇರಿ ಮಾಡಲು ೩೦ರಿಂದ ೩೫ ಸಾವಿರ ರೂಪಾಯಿಗಳೆಂದರೆ ಅದು ಯಾರ ಹಣ ? ಅದನ್ನು ಆಲೋಚನೆ ಮಾಡಿ. ಮತ್ತೆ ಬೆಂಗಳೂರು ನಾರ್ತ್ ಅಂಡ್ ಸೌತ್ ತಾಲ್ಲೂಕಿನ ಅಗ್ರಿಕಲ್ಚರಲ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಎಂದು ಇದೆ. ಅದು ನನ್ನ ತಾಲ್ಲೂಕಿನಲ್ಲಿಯೇ ಬರುತ್ತದೆ. ಇದರಲ್ಲಿ ಮಿಸ್ ಅಪ್ರೊಪ್ರಿಯೇಷನ್ ಆಗಿದೆಯೆಂದು ಹೇಳುವುದಿಲ್ಲ. ಕೆಲವಾರು ತಪ್ಪು ವಿಧಾನಗಳು ನಡೆದಿವೆ ಉದಾಹರಣೆಗೆ ಸೊಸೈಟಿಗಳಲ್ಲಿ ವರ್ಷಕ್ಕೊಂದೇ ಸಾರಿ ಆಡಿಟ್ ನಡೆಯಬೇಕು ಆದರೆ ಇಲ್ಲಿ ಆಡಿಟ್ ಆದ ೩ ತಿಂಗಳಲ್ಲಿ ಎರಡನೇ ಆಡಿಟ್ ಮಾಡಿಸಿದ್ದಾರೆ ಇದಕ್ಕೆ ಕಾರಣವೇನು ? ಇದರ ಹಿನ್ನೆಲೆಯನ್ನು ತಾವು ಸ್ವಲ್ಪ ಪರೀಕ್ಷೆ ಮಾಡಿಸಬೇಕಾಗಿದೆ. ಇದಕ್ಕೆ ರಿಜಿಸ್ಟ್ರಾರ್‌ರವರು ಆರ್ಡರ್ ಮಾಡಿಲ್ಲ, ಆದರೂ ಈ ಕೆಲಸ ನಡೆದು ಹೋಗಿದೆ. ಇನ್ನು ನ್ಯಾಶನಲ್ ಟೂರಿಸ್ಟ್ ಟ್ಯಾಕ್ಸಿ ಕೋ ಆಪರೇಟಿವ್ ಸೊಸೈಟಿ ಇದು ತಮಗೆ ಗೊತ್ತಿದೆ ಅದರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ ಅದರಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆ ಎಂಬುದು. ಕೋ ಆಪರೇಟಿವ್ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕ ಜನವೇ ಈ ರೀತಿ ಸೊಸೈಟಿಗಳಲ್ಲಿ ಲಂಕಾಸುರರಾಗಲು ಕೆಲಸ ಮಾಡಿದರೆ ಹೇಗೆ ? ಲಾಸ್ ಮಾಡುವುದಕ್ಕೂ ಒಂದು ಮಿತಿ ಇಟ್ಟು ಬಿಡಿ. ಅದಕ್ಕೆ ಬೇಕಾದರೆ ಕಾನೂನಿನಲ್ಲಿ ಒಂದು ತಿದ್ದುಪಡಿ ತಂದುಬಿಡಿ. ಇವತ್ತು ಶೇರ್ ಕ್ಯಾಪಿಟಲ್ ಏನು ಕೊಟ್ಟಿರುತ್ತಾರೋ ಅಷ್ಟನ್ನು ಎರಡನೇ ಜನರಲ್ ಬಾಡಿ ನಡೆಸಿ ಸಂಪೂರ್ಣ ಹಣ ಖರ್ಚು ಮಾಡುತ್ತಾರೆ. ಜನರಲ್ ಬಾಡಿ ಮೀಟಿಂಗ್‌ಗೆ ಒಬ್ಬ ಸದಸ್ಯರಿಗೆ ಎರಡೂವರೆ ರೂಪಾಯಿಗಳ ವರೆಗೆ ಖರ್ಚು ಮಾಡಬಹುದೆಂದು ಜವಾಬ್ದಾರಿ ಸ್ಥಾನದಲ್ಲಿರುವವರು ಹೇಳುತ್ತಾರೆ. ಆದರೆ ಅಶೋಕ ಹೋಟಲ್‌ನಲ್ಲಿ ಡಿನ್ನರ್ ಇಟ್ಟುಕೊಂಡರೆ ಎಷ್ಟು ಆಗುತ್ತದೆ ? ಎರಡೂವರೆ ರೂಪಾಯಿಗಳಿಗೆ ಡಿನ್ನರ್

ಕೊಡುತ್ತಾರೆಯೇ ? ಅಲ್ಲಿ ಟಿಪ್ಸ್ ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ಎಲ್ಲಿದೆ ಪ್ರಾವಿಜನ್ ? ಇದರ ಬಗ್ಗೆ ಎಲ್ಲಾ ತಾವು ಆಲೋಚನೆ ಮಾಡಬೇಕು. ಇನ್ನು ಕರ್ನಾಟಕ ಕೋ ಆಪರೇಟಿವ್ ಬ್ರೂವರಿಸ್ ಸೊಸೈಟಿ ಅಂತ ಇದೆ. ಇದು ಮಾಯಾ ಬಜಾರ್ ತರಹವಾಗಿದೆ. ಅದು ಹೇಗೆಂದರೆ ನಮ್ಮ ಜನ ಬೆಂಗಳೂರು ಸುತ್ತ ಮುತ್ತ ದ್ರಾಕ್ಷಿ ಬೆಳೆಯುತ್ತಿದ್ದಾರೆ. ಅದನ್ನು ಬೆಂಗಳೂರಿನಲ್ಲಿ ೧ ಟನ್ನಿಗೆ ೧೫೦೦ ರೂಪಾಯಿಗಳ ವರೆಗೆ ತೆಗೆದುಕೊಳ್ಳುತ್ತಿದ್ದಾರೆ ರೈತರು ತುಮಕೂರು ರಸ್ತೆಯಲ್ಲಿರುವ ಗೋಡೌನ್‌ಗೆ ತೆಗೆದುಕೊಂಡು ಹೋಗಿ ಆ ಬ್ಲೂ ದ್ರಾಕ್ಷಿಯನ್ನು ಕೊಡುತ್ತಾರೆ. ಅವರ ಕಛೇರಿ ಇರುವುದು ಕುಮಾರ ಪಾರ್ಕ್‌ನಲ್ಲಿ. ಆ ಆಫೀಸಿನಲ್ಲಿ ಆ ಸೊಸೈಟಿಯವರು ಲೆಕ್ಕ ಕೊಡುವುದು ಬ್ಲೂ ದ್ರಾಕ್ಷಿಯಲ್ಲ ಬ್ಯೂಟಿ ಸೀಡ್‌ಲೆಸ್ ದ್ರಾಕ್ಷಿಯನ್ನು ಕೊಟ್ಟಿದ್ದಾರೆ ಅಂತ ಹೇಳಿ ಒಂದು ಟನ್‌ಗೆ ೮ ಸಾವಿರ ರೂಪಾಯಿಗಳನ್ನು ಲೆಕ್ಕಕ್ಕೆ ಬರೆಯುತ್ತಾರೆ. ಇದರಿಂದ ಆ ಸೊಸೈಟಿ ಸಂಪೂರ್ಣವಾಗಿ ನಿಂತು ಹೋಗಿದೆ. ಅದನ್ನು ಸರಿಪಡಿಸಲು ಒಬ್ಬ ಅಡ್ಮಿನಿಸ್ಟ್ರೇಟರನ್ನು ಅಲ್ಲಿಗೆ ನೇಮಕ ಮಾಡಿದ್ದೀರಿ ಆದರೂ ಸುಮ್ಮನೇ ಕೂತುಕೊಂಡಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಕರ್ನಾಟಕ ದೇಶದಲ್ಲಿಯೇ ಬ್ಯೂಟಿ ಸೀಡ್‌ಲೆಸ್ ದ್ರಾಕ್ಷಿ ೧೦ ಟನ್ನಿಗಿಂತ ಹೆಚ್ಚಿಗೆ ಬೆಳೆಯಾಗುತ್ತಿಲ್ಲ. ಆದರೆ ಈ ಸೊಸೈಟಿಯಲ್ಲಿ ಅವರು ಕೊಟ್ಟಿರತಕ್ಕ ಲೆಕ್ಕ ಸುಮಾರು ೫೦ ಟನ್ ; ಇನ್ನು ಬಾಕಿ ೪೦ ಟನ್ ಎಲ್ಲಿಂದ ಬಂತು ? ಎಂದು ತಮ್ಮಿಂದ ಉತ್ತರ ಕೇಳಬಯಸುತ್ತೇನೆ. ಸೊಸೈಟಿಗಳ ಬಂಡವಾಳ ಈ ರೀತಿ ಕೆಡುತ್ತಿರುವಾಗ ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ ಎಂದು ಕೇಳುತ್ತೇನೆ ? ಇನ್ನು ವಿದ್ಯಾವಂತರು ಬುದ್ಧಿವಂತರು ಇರತಕ್ಕ ಬಸವನಗುಡಿ ಕೋ ಆಪರೇಟೀವ್ ಸೊಸೈಟಿಯ ವಿಷಯ ತಮಗೂ ಗೊತ್ತಿದೆ. ಅವಿದ್ಯಾವಂತರು ಏನಾದರೂ ತಪ್ಪು ಮಾಡಿದರೆ, ರೈತರು ಏನಾದರೂ ತಪ್ಪು ಮಾಡಿದರೆ ಅವನ ಮನೆಗೆ ನುಗ್ಗಿ ಹಸು, ಕರು, ಬಾಗಿಲು, ಕಿಟಕಿಗಳನ್ನು ಕಿತ್ತುಕೊಂಡು ಹೋಗುತ್ತೀರಿ. ಆದರೆ ಬಸವನಗುಡಿ ಕೋ ಆಪರೇಟಿವ್ ಸೊಸೈಟಿಯು ವಿದ್ಯಾವಂತರು ನಡೆಸತಕ್ಕ ಸಂಸ್ಥೆಯಾಗಿದೆ. ಅಲ್ಲಿ ಎಷ್ಟು ಲಕ್ಷ ರೂಪಾಯಿಗಳು ಮಿಸ್ ಅಪ್ರೊಪ್ರಿಯೇಷನ್ ಆಗಿದೆ. ಅಲ್ಲಿರತಕ್ಕ ಡ್ರಗ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಅವ್ಯವಹಾರ ನಡೆದಾಗ ಅವರ ಮೇಲೆ ನೀವು ಏತಕ್ಕೆ ಜವಾಬ್ದಾರಿಯನ್ನು ಹೊರಿಸಲಿಲ್ಲ ? ಅವರ ಮೇಲೆ ಏನು ಕ್ರಮವನ್ನು ಕೈಕೊಂಡಿದ್ದೀರಿ ? ನಾನು ಇದನ್ನು ಕೆಲವು ಸೊಸೈಟಿಗಳನ್ನು ಮಾತ್ರ ಸೆಲೆಕ್ಟ್ ಮಾಡಿ ಹೇಳುತ್ತಿದ್ದೇನೆ. ಎಲ್ಲಾ ಸೊಸೈಟಿಗಳ ಬಂಡವಾಳವೂ ಅಷ್ಟೇ ಆಗಿದೆ. ಎಲರೂ ಸಹಕಾರ ಸಂಘಗಳನ್ನು ನಿರ್ಮಿಸಿಕೊಂಡಿರುವಾಗ ಮಾಡಿಕೊಂಡಿರುವಾಗ ನಾವು ಏತಕ್ಕೆ ಒಂದು ಸೊಸೈಟಿ ಮಾಡಿಕೊಳ್ಳಬಾರದೆಂದು ದೊಡ್ಡ ದೊಡ್ಡ ಐ.ಎ.ಎಸ್., ಐ.ಪಿ.ಎಸ್. ಆಫೀಸರ್‌ಗಳು ಸೇರಿ ಒಂದು ಸೊಸೈಟಿ ಮಾಡಿಕೊಂಡಿದ್ದಾರೆ. ಅದು ಮೆಟ್ರೋಪಾಲಿಟನ್ ಹೌಸ್ ಬಿಲ್ಡಿಂಗ್ ಸೊಸೈಟಿ ಅಂತ ಅದರ ಹೆಸರು. ಅದನ್ನು ಯಾರು ಮಾಡಿದ್ದಾರೆ ಎಂಬುದು ತಮಗೆಲ್ಲಾ ಗೊತ್ತಿದೆ. ಪಾಪ ಅವರಿಗೆ ಎಲ್ಲೂ ಹಣ ದೊರಕಲಿಲ್ಲವೆಂದು ಕಾಣಿಸುತ್ತದೆ, ಅದಕ್ಕೆ ಈ ಹೌಸ್ ಬಿಲ್ಡಿಂಗ್ ಸೊಸೈಟಿ ಅಂತ ಮಾಡಿಕೊಂಡರು. ಅವರಿಗೆ ಅವರ ಸ್ಯಾಲರಿ ಮೇಲೆ ಸರ್ಕಾರದಲ್ಲಿ ಅವರಿಗೆ ಹೌಸ್ ಬಿಲ್ಡಿಂಗ್ ಅಡ್ವಾನ್ಸ್ ಸಿಗುತ್ತಿಲ್ಲವೇ? ಬಡವರ ಉದ್ಧಾರಕ್ಕಾಗಿ ಇಟ್ಟಿರತಕ್ಕ ಈ ಹೌಸಿಂಗ್ ಸ್ಕೀಂನ್ನು ಪಾಪ ಆ ಆಫೀಸರ್ಸ್‌ಗಳು ನೋಡಿದರೂ, ಎಲ್ಲರೂ ತೆಗೆದುಕೊಳ್ಳುತ್ತಿದ್ದಾರೆ. ಮಾನ್ಯ ಕೆಲವು ಮಂತ್ರಿಗಳವರೂ ಕೂಡ ಕೆಲವರು ಹೌಸಿಂಗ್ ಬೋರ್ಡ್ ಹಣದಿಂದ ಸಾಲ ಪಡೆದು ಮನೆಗಳನ್ನು ಕಟ್ಟಿಸಿಕೊಂಡಿರುವುದನ್ನು ನೋಡಿ ಅವರಿಗೂ ಸಹ ನಾವು ಏತಕ್ಕೆ ಒಂದು ಸೊಸೈಟಿ ಮಾಡಿಕೊಳ್ಳಬಾರದು ಅಂತ ಅನ್ನಿಸಿ ಮಾಡಿಕೊಂಡಿದ್ದಾರೆ. ಮಾಡಿಕೊಳ್ಳಲಿ ಬೇಡವೆಂದು ಹೇಳುವುದಿಲ್ಲ ಆದರೆ ತೆಗೆದುಕೊಂಡ ಹಣವನ್ನು ಎಷ್ಟು ಜನ ವಾಪಸ್ಸು ಮಾಡಿದ್ದಾರೆ, ಎಷ್ಟೆಷ್ಟು ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳವರು ಮಾಹಿತಿಯನ್ನು ಕೊಡಬೇಕಾಗುತ್ತದೆ. ಇಂಥಾದ್ದಕ್ಕೆಲ್ಲಾ ಏತಕ್ಕೆ ರಿಜಿಸ್ಟ್ರೇಷನ್‌ಗೆ ಅವಕಾಶ ಮಾಡಿಕೊಟ್ಟಿರಿ ಅಂತ ಕೇಳುತ್ತೇನೆ ? ಇಷತ್ತು ಒಬ್ಬ ಆಫೀಸರು ತನ್ನ ಹೆಸರಿನಲ್ಲಿಯೂ ಸಾಲ ತೆಗೆದುಕೊಂಡಿದ್ದಾನೆ ಮತ್ತೆ ಆತನ ಹೆಂಡತಿ ಕೂಡ ಒಬ್ಬ ಆಫೀಸರ್ ಆಗಿದ್ದು ಆಕೆಯು ಹೆಸರಿನಲ್ಲಿಯೂ ಸಾಲ ತೆಗೆದುಕೊಂಡಿದ್ದಾರೆ ಹೀಗೆ ಇಬ್ಬರು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೇ? ಅದನ್ನು ವೆರಿಫೈ ಮಾಡಿಸಿ. ಆ ರೀತಿ ತೆಗೆದುಕೊಂಡರೂ ಎರಡು ಮನೆಗಳನ್ನು ಕಟ್ಟಿದ್ದಾರೆಯೇ ? ಕಟ್ಟಿದ್ದರೆ ಗಂಡ ಒಂದು ಕಡೆ ಹೆಂಡತಿ ಒಂದು ಕಡೆ ವಾಸ ಮಾಡುತ್ತಿದ್ದಾರೆಯೇ ? ಇಲ್ಲ ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟಿದ್ದಾರೆಯೇ ಎಂಬುದನ್ನು ತಾವು ವೆರಿಫೈ ಮಾಡಿಸಬೇಕಾಗುತ್ತದೆ. ನಾನು ಇದನ್ನು ಸೀರಿಯಸ್ ಆಗಿ ಹೇಳುತ್ತಿದ್ದೇನೆ. ಯಾವ ಜನ ಇವತ್ತು ಆದರ್ಶ ನಾಯಕತ್ವದಲ್ಲಿ ಸಹಕಾರ ಚಳುವಳಿ ಬೆಳೆಯಬೇಕೋ ಅವರೇ ಅದನ್ನು ಮುರಿಯುವ ಹಾಗೆ

ನಡೆದುಕೊಳ್ಳುತ್ತಿದ್ದಾರೆ ಅದಕ್ಕೋಸ್ಕರ ತಾವು ಇದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕು. ಯಾರು ಯಾರು ಎಷ್ಟೆಷ್ಟು ಹಣವನ್ನು ತೆಗೆದುಕೊಂಡಿದ್ದಾರೆ? ಎಷ್ಟೆಷ್ಟನ್ನು ಉಪಯೋಗಿಸಿಕೊಂಡಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಭಾವಿಗೆ ಮಾತ್ರ ಹಣ ಖರ್ಚಾಗಿರುತ್ತದೆ ಆದರೆ ಅಲ್ಲಿ ಭಾವಿನೇ ಇರುವುದಿಲ್ಲ ಗೇರು ಬೀಜ ಹಾಕುವುದಕ್ಕೆ ಅಂತ ಸಾಲ ತೆಗೆದುಕೊಂಡಿರುತ್ತಾನೆ ಆದರೆ ಗೇರು ಬೀಜವನ್ನೇ ಹಾಕುವುದಿಲ್ಲ ಕೇಳಿದರೆ ಗೇರು ಬೀಜವೇ ಸಿಗಲಿಲ್ಲ ಅಂತ ಹೇಳಿಬಿಡುತ್ತಾನೆ. ಆ ರೀತಿ ಏನಾದರೂ ಮಾಡಿದ್ದಾರೆಯೇ ? ಎಂಬುದನ್ನು ತಾವು ಪತ್ತೆ ಹಚ್ಚಬೇಕು. ಆದುದರಿಂದ ದಯಮಾಡಿ ಇದನ್ನೆಲ್ಲಾ ಪರಿಶೀಲನೆ ಮಾಡಿ ನನಗೆ ವಿವರಣೆಯನ್ನು ಕೊಡಬೇಕೆಂದು ಕೇಳುತ್ತೇನೆ ಸ್ವಾಮಿ. ಇನ್ನೊಂದು ಬಹಳ ಮುಖ್ಯವಾದುದೇನೆಂದರೆ ಅದು ಮಾನ್ಯ ಸಹಕಾರ ಮಂತ್ರಿಗಳಿಗೆ ಸಂಬಂಧಪಟ್ಟದ್ದು; ಕೋ—ಆಪರೇಟೀವ್ ಡಿಪಾರ್ಟ್‌ಮೆಂಟ್ ಎಂಪ್ಲಾಯೀಸ್ ಕೊ—ಆಪರೇಟೀವ್ ಸೊಸೈಟಿ ಲಿಮಿಟೆಡ್, ಎಂಬ ಸೊಸೈಟಿ ಇದೆ. ಅವರೂ ನೋಡಿದರು ಎಲ್ಲ ವರ್ಗದ ಜನರು ಸೊಸೈಟಿಗಳನ್ನು ಮಾಡಿರುವಾಗ ಇಲಾಖೆಯಲ್ಲಿರತಕ್ಕ ಜನಗಳಾದ ನಾವು ಏಕೆ ಮಾಡಿ ಪ್ರಯೋಜನ ಪಡೆಯಬಾರದೆಂದು ಮಾಡಿದ್ದಾರೆ. ಅದರಲ್ಲಿ ತಪ್ಪೇನು ಇಲ್ಲ. ಆದರೆ ಅದು ಏನಾಯಿತು ಹೇಗೆ ನಡೆಯುತ್ತಿದೆ ? ರಿಜಿಸ್ಟರ್ ಆಯಿತು ಅದರ ಅಧ್ಯಕ್ಷರು ಯಾರು ? ಅದು ಯಾವ ರೀತಿ ಕೆಲಸ ಮಾಡುತ್ತಿದೆ ? ಅದರ ಜನರಲ್ ಬಾಡಿ ಮೀಟಿಂಗ್ ಆಗಿ ೨ ವರ್ಷವಾಗಿದೆ ಬೇರೆಯವರು ಜನರಲ್ ಬಾಡಿ ನಡೆಸದೆ ಇದ್ದರೆ ಅವರನ್ನು ಕೋರ್ಟ್ ಮುಂದೆ ತೆಗೆದುಕೊಂಡು ಹೋಗತಕ್ಕ ಜನ, ತಮ್ಮ ಸೊಸೈಟಿಯ ಜನರಲ್ ಬಾಡಿಯನ್ನು ಮಾಡಿಸಿ ಆದರ್ಶ ತೋರಿಸದಿದ್ದರೆ ಅವರನ್ನು ಏನು ಮಾಡಬೇಕು ? ಇದರಲ್ಲಿ ಯಾರ್ಯಾರು ಇನ್‌ವಾಲ್ವ್ ಆಗಿದ್ದಾರೆ ; ಸೊಸೈಟಿಯಿಂದ ಎಷ್ಟೆಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆದಿದ್ದಾರೆ ; ಎಂಬುದನ್ನು ಪತ್ತೆ ಹಚ್ಚಿ ಅವರುಗಳಿಗೆಲ್ಲ ಉಗ್ರವಾದ ಶಿಕ್ಷೆಯನ್ನು ಕೊಡಬೇಕು. ಏನೆಂದರೆ ಅವರು ಮಾಡಿದ ತಪ್ಪನ್ನು ಕ್ಷಮಿಸುವುದಾದರೂ ಹೇಗೆ ? ಡೆಪ್ಯೂಟಿ ರಿಜಿಸ್ಟ್ರಾರ್‌ರವರೇ ಅದರ ಅಧ್ಯಕ್ಷರು. ೨ ವರ್ಷಗಳಿಂದ ಜನರಲ್ ಬಾಡಿ ಮೀಟಿಂಗ್ ನಡೆಸಿಲ್ಲ, ಆಡಿಟ್ ಆಗಿಲ್ಲ ಎಂದರೆ ಹೇಗೆ ? ಗೆಜೆಟೆಡ್ ಅಧಿಕಾರಿಗಳೇ ಆ ರೀತಿ ಮಾಡುತ್ತಿದ್ದಾರೆ. ರೈತರಿಗೆ ಬುದ್ಧಿ ಹೇಳತಕ್ಕ ಜನರೇ ಆ ರೀತಿ ಮಾಡಿದ್ದಾರೆ. ಪರ್ಮನೆಂಟ್ ಡೀಫಾಲ್ಟರ್ ಆಗಿದ್ದಾರೆ. ಅದಕ್ಕೋಸ್ಕರ ಇದನ್ನು ಸ್ವಲ್ಪ ಸ್ಪೆಶಲ್ ಇಂಟರೆಸ್ಟ್‌ನಿಂದ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ಈ ಸೊಸೈಟಿಯ ಷೇರು ಬಂಡವಾಳಕ್ಕಿಂತ ನಷ್ಟವೇ ಜಾಸ್ತಿಯಾಗಿದೆ. ಹಾಗೂ ಒಂದು ಲಕ್ಷ ರೂಪಾಯಿಯನ್ನು ಪುನಃ ಕೊಟ್ಟಿದ್ದೀರಿ. ನಮ್ಮ ನೌಕರರು ಎಂಬ ವಿಶೇಷ ಪ್ರೀತಿಯಿಂದ ಇದು ನ್ಯಾಯವೆ? ಅದು ಲಿಕ್ವಿಡೇಷನ್‌ಗೆ ಬಂದಿದೆ ; ಬಹುಶಃ ಇನ್ನು ಅಡಿ ನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿಲ್ಲ. ಎಲ್ಲ ಸೊಸೈಟಿಗಳು ಹೀಗೆ ಆಗುತ್ತಾ ಹೋದರೆ ಎಷ್ಟು ಜನ ಅಡ್ಮಿನಿಸ್ಟ್ರೇಟರುಗಳನ್ನು ತರುತ್ತೀರಿ, ಎಲ್ಲಿಂದ ತರುತ್ತೀರಿ ? ಸುಮಾರು ೨೨ ಸಾವಿರ ಸೊಸೈಟಿಗಳಿಗೆ ೨೨ ಸಾವಿರ ಅಡ್ಮಿನಿಸ್ಟ್ರೇಟರುಗಳನ್ನು ನೇಮಿಸುವುದು ಎಂದರೆ ನಿಮಗೂ ಬಹಳ ಕಷ್ಟ ಇದೆ. ಆಫೀಸರ್ಸ್ ಮೆಟ್ರೋಪಾಲಿಟನ್ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿಯನ್ನು ಐ.ಎ.ಎಸ್. ಮತ್ತು ಐ.ಪಿ.ಎಸ್ ಅಧಿಕಾರಿಗಳು ಮಾಡಿರುವ ಹಾಗೆ ಸಹಕಾರ ಇಲಾಖೆಯವರು ಕೂಡ ತಮ್ಮ ಒಂದು ಸೊಸೈಟಿಯನ್ನು ಮಾಡಿದ್ದಾರೆ. ಇದನ್ನೆಲ್ಲಾ ನೋಡಿದ ಪೋಲೀಸ್‌ನವರು ನಾವು ಏನು ಕಡಿಮೆ ಎಂದು ಅವರೂ ಕೂಡ "ಬೆಂಗಳೂರು ಸಿಟಿ ಪೋಲೀಸ್ ಅಫಿಸಿಯಲ್ಸ್ ಕೊ—ಆಪರೇಟೀವ್ ಸೊಸೈಟಿ" ಎಂದು ಒಂದು ಸೊಸೈಟಿಯನ್ನು ಮಾಡಿದರು. ಇದರಲ್ಲಿ ಯಾರ್ಯಾರು ಇದ್ದಾರೆ, ಏನೇನು ಮಾಡಿದ್ದಾರೆ ಎಂಬ ವಿವರಗಳನ್ನು ನೀವೇ ತರಿಸಿಕೊಳ್ಳಿ. ವಿವರಗಳನ್ನು ನಾನು ಹೇಳುತ್ತಾ ಹೋಗುವುದಕ್ಕೆ ಕಾಲಾವಕಾಶ ಇಲ್ಲ. ಇನ್ನು ಕೇವಲ ೧೫ ನಿಮಿಷ ಮಾತ್ರ ಇದೆ. ಪೋಲೀಸ್‌ನವರಾಗಿ ಈ ರೀತಿ ಮಾಡಬಹುದೆ ? ಎಲ್ಲ ಸೊಸೈಟಿಗಳಿಗೂ ಹಣ ಸರಬರಾಜು ಮಾಡತಕ್ಕದ್ದು ರಿಸರ್ವ್ ಬ್ಯಾಂಕ್. ಏತಕ್ಕೆ ಹೇಳುತ್ತಿದ್ದೇನೆಂದರೆ, ಬರೀ ರಾಜ್ಯ ಸರ್ಕಾರವನ್ನು ಟೀಕೆ ಮಾಡುತ್ತಿದ್ದೇನೆಂದು ಅಲ್ಲ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಕೋ ಆಪರೇಟೀವ್ ಕ್ಯಾಂಟೀನ್ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಹೇಳುತ್ತೇನೆ. ಅದಕ್ಕೆ ಅಲ್ಲಿನ ಪ್ರತಿಯೊಬ್ಬ ನೌಕರನಿಗೂ ಪ್ರತಿ ದಿವಸ ೨ ರೂಪಾಯಿ ಕೊಡತಕ್ಕದ್ದು ವಾಡಿಕೆಯಾಗಿದ, ಜೊತೆಗೆ ಅಲ್ಲಿ ಕೆಲಸ ಮಾಡತಕ್ಕವರಿಗಾಗಿ ಪ್ರತಿ ವರ್ಷ ೧೦ ಸಾವಿರ ರೂಪಾಯಿ ಸಬ್ಸಿಡಿ ಕೂಡ ಕೊಡಲಾಗುತ್ತಿದೆ. ಅಲ್ಲಿ ಇದುವರೆಗೆ ಸುಮಾರು ೩೫ ಸಾವಿರ ರೂಪಾಯಿ ಮಿಸ್ ಅಪ್ರೊಪ್ರಿಯೇಷನ್ ಆಗಿದೆ ಅಲ್ಲಿ ಕೆಲಸ ಮಾಡತಕ್ಕವರ ಸಂಖ್ಯೆ ಕೇವಲ ೮ ಆದರೆ ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಇರತಕ್ಕದ್ದು ೨೦ ಜನ ಎಂದು ತಿಳಿದು ಬಂದಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಣ ದುರುಪಯೋಗ ಎಂಬುದು ಕೇವಲ ಕೆಳಮಟ್ಟದ ೮೦ ಪರ್ಸೆಂಟ್ ಜನಕ್ಕೆ ಮಾತ್ರ ಇರುತ್ತದೆಂದು ಅಲ್ಲ, ಇದಕ್ಕಿಂತ

ನೂರ್ಮಡಿಯಾಗಿ ಈ ಮೇಲ್ಮಟ್ಟದ ವರ್ಗದಲ್ಲಿ ಕಾಣುತ್ತಿದೆ. ಇವರು ಹೇಳುವುದೆಲ್ಲ ಸತ್ಯ ಎಂದು ತಿಳಿದುಕೊಳ್ಳಬೇಡಿ ಆ ಬಗ್ಗೆ ನಾನು ವಿವರ ಕೊಡುವುದಕ್ಕೆ ಹೋಗುವುದಿಲ್ಲ. ಮಿಸ್ ಅಪ್ರೋಪ್ರಿಯೆ ಷನ್ ಎಂಥವರ ಕೈಯಲ್ಲಾಗಿದೆ ಎಂಬುದನ್ನು ನೀವೇ ಯೋಚನೆ ಮಾಡಿ. ಬಂದಂತಹ ಹಣವನ್ನು ಕ್ಯಾಷ್ ಬುಕ್ಕಿಗೆ ಜಮೆ ತೆಗೆದುಕೊಂಡಿದ್ದಾರೆಯೋ ? ಇದು ಬಹಳ ಸೀರಿಯಸ್ ಅಲಿಗೆ ಷನ್. ಇನ್ನು ಬೆಂಗಳೂರು ಉತ್ತರ ತಾಲ್ಲೂಕು ಪ್ರಾಥಮಿಕ ಅಭಿವೃದ್ಧಿ ಸಹಕಾರ ಸಂಘ ಎಂದು ಒಂದು ಸಹಕಾರ ಸಂಘವಿದೆ. ಅದರಲ್ಲಿ ಒಂದಾನೊಂದು ಕಾಲದಲ್ಲಿ ಮಾಡಿರತಕ್ಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಾಗ ನಿರ್ದಿಷ್ಟವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಮ್ಯಾನೇಜೀರಿಯಲ್ ಕಾಸ್ಟಿಗೆ ಎಷ್ಟು ಹಣವನ್ನು ಕೊಡುತ್ತಾರೆ ; ಒಂದು ದಿವಸಕ್ಕೆ ೧೦೦ ಟೆಲಿಫೋನ್ ಮಾಡಿದರೆ ಆ ಖರ್ಚನ್ನು ಸರ್ಕಾರ ಕೊಡಬೇಕೆಂದು ಇದೆಯೋ? ತಾಲ್ಲೂಕು ಸೊಸೈಟಿಗಳಲ್ಲಿ ಅದಕ್ಕೆ ಒಂದು ಮಿತಿ ಇರಬೇಕು. ಯಾವು ಯಾವುದಕ್ಕೆ ಎಷ್ಟೆಷ್ಟು ಮಿತಿ ಇರಬೇಕು. ಅದಕ್ಕೆ ಮೇಲ್ಪಟ್ಟರೆ ಏನು ಮಾಡಬೇಕು ಎಂಬುದನ್ನೆಲ್ಲ ಗೊತ್ತುಪಡಿಸಬೇಕು. ಇಲ್ಲಿ ಎದಲ್ಲಿ ಕೊಡತಕ್ಕ ಷೇರು ಬಂಡವಾಳ ನೂರರಷ್ಟು ಸಾಕಾಗುವುದಿಲ್ಲ ಆದ್ದರಿಂದ, ಅದನ್ನು ಸ್ಪಷ್ಟೀಕರಿಸಬೇಕು. ಸೊಸೈಟಿ ಆಕ್ಟ್‌ನಲ್ಲಿ ದೋಷ ಇದೆ ; ಅದನ್ನು ಸರಿಪಡಿಸಿದರೆ ಒಳ್ಳೆಯ ಗೈಡ್‌ಲೈನ್ಸ್ ಕೊಟ್ಟಂತಾಗುತ್ತದೆ. ಮ್ಯಾನೇಜೀರಿಯಲ್ ಕಾಸ್ಟ್ ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚಾಗಿದ ಇದಕ್ಕೆ ಕಾರಣಕರ್ತರು ಯಾರು? ಸೊಸೈಟಿಯಲ್ಲಿ ಕುಳಿತುಕೊಂಡು ಸ್ನೇಹಿತರಿಗೆ, ಇತರ ಸೊಸೈಟಿಗಳಿಗೆ, ಬ್ಯಾಂಕಿಗೆ ಮಂತ್ರಿಗಳಿಗೆ ರಿಜಿಸ್ಟ್ರಾರ್ ಒಡನೆ ಎಲ್ಲ ಮಾತನಾಡಬೇಕು ; ಅದು ತಪ್ಪು ಎಂದು ಅಲ್ಲ. ಅದಕ್ಕೆ ಒಂದು ಮಿತಿ ಇರಬೇಕು : ಇಂತಿಷ್ಟು ಫೋನ್ ಮಾಡಬಹುದು ಎಂದು. ಇನ್ನು ಎರಡನೆಯದಾಗಿ, ಹಣ ವಸೂಲಿಗೆ ಹೋಗಿ ಯಾರು ಡೀಫಾಲ್ಟರ್ ಆಗಿರುತ್ತಾರೋ ಅವರಿಂದ ಹಣವನ್ನು ವಸೂಲಿ ಮಾಡುತ್ತಾರೆ. ಆ ಕಲೆಕ್ಷನ್ ಚಾರ್ಜಸ್ ಎಲ್ಲವನ್ನು ಇವರ ತಲೆ ಮೇಲೆ ಹಾಕುತ್ತಾರೆ. ಪಾಪ, ಆ ಬಡ ಸಾಲಗಾರರು, ಈ ಅಧಿಕಾರಿಗಳ ಟ್ಯಾಕ್ಸಿಗೆ ಬಾಡಿಗೆ ಕೊಡಬೇಕು, ಮಿಲಿಟರಿ ಹೋಟೆಲ್ಲಿಗೆ, ಬೀಡಿ ಸಿಗರೇಟಿಗೆ, ಬಾರ್‌ಗೆ ತಗಲುವ ಎಲ್ಲ ವೆಚ್ಚವನ್ನು ಸಾಲ ಕೊಡಬೇಕು. ಈ ಸೊಸೈಟಿಗಳಲ್ಲಿ ಎರಡು ತತ್ವಗಳ ನಿರ್ವಹಣೆಯಾಗಬೇಕು. I am not accusing the society. ರಿಕವರಿ ಚಾರ್ಜನ್ನು ೧-೨-೩-೪-೧೦ ಪರ್ಸೆಂಟ್ ಹಾಕುತ್ತೀರಾ ? ಎಷ್ಟು ಹಾಕುತ್ತೀರಿ ಎಂಬುದನ್ನು ಯೋಚಿಸಿ. ೧೦೦ ರೂಪಾಯಿ ಕೊಡಬೇಕಾಗಿದ್ದರೆ ಅದಕ್ಕೆ ೩೪ ರೂಪಾಯಿ ರಿಕವರಿ ಚಾರ್ಜ್ ಹಾಕಿದರೆ ಬಡವರು ಬದುಕುವುದಕ್ಕೆ ಸಾಧ್ಯವೆ ? I think you are really acting as Shylock. ನನಗೆ ಗೊತ್ತಿದೆ ; ಇಂಥ ಅನೇಕ ಕೇಸುಗಳನ್ನು ತಮ್ಮ ಮುಂದೆ ಇಡುತ್ತೇನೆ. ಕೇವಲ ೧೦೦ ರೂಪಾಯಿ ಬಾಕಿ ವಸೂಲಿಗೆ ೩೪ ರೂಪಾಯಿ ರಿಕವರಿ ಚಾರ್ಜ್ ಹಾಕತಕ್ಕದ್ದು ಧರ್ಮವೆ ? ಇದೇನು ಚಕ್ರ ಬಡ್ಡಿಯಲ್ಲ, This is a policy adopted by Shylock. ಇಂಥದ್ದಕ್ಕೆ ಮೊದಲು ಮಟ್ಟಗೋಲು ಹಾಕಬೇಕು. ಕೂಡಲೇ ಈ ಬಗ್ಗೆ ಒಂದು ತಿದ್ದುಪಡಿಯನ್ನು ಕೋ-ಆಪರೇಟೀವ್ ಆಕ್ಟ್‌ಗೆ ತನ್ನಿ. ಅದರಲ್ಲಿ ರಿಕವರಿ ಚಾರ್ಜ್ ಇಷ್ಟಕ್ಕೆ ಇಷ್ಟೇ ಇರಬೇಕೆಂದು ನಿಗದಿ ಮಾಡಿ ; ಒಂದು ವೇಳೆ ಏನಾದರೂ ಹೆಚ್ಚಿಗೆ ಮಾಡಿದರೆ ಕೈಯಿಂದ ಕೊಡಬೇಕೆಂದು ಹೇಳಿ. ಅದನ್ನು ಅಂಗೀಕರಿಸುವುದಕ್ಕೆ ನಾವು ಈ ವರ್ಷದಿಂದ ಸಿದ್ಧರಿದ್ದೇವೆ. ಸ್ವೇಚ್ಛೆಯಿಂದ ಬಡವರ ತಲೆ ಮೇಲೆ ರಿಕವರಿ ಚಾರ್ಜ್ ಹಾಕತಕ್ಕದ್ದು ಮತ್ತು ಅವರ ಆಸ್ತಿಪಾಸ್ತಿಗಳನ್ನು ಹರಾಜು ಹಾಕತಕ್ಕದ್ದು ಬಹಳ ದುರ್ವ್ಯವಹಾರ ಎಂದು ನಾನು ತುಂಬಾ ನೊಂದ ಮನಸ್ಸಿನಿಂದ ಹೇಳುತ್ತೇನೆ. ಇನ್ನು ಬೆಂಗಳೂರು ಜಿಲ್ಲಾ ಸಹಕಾರ ಬ್ಯಾಂಕ್, ಲಿಮಿಟೆಡ್‌ನ ವಿಚಾರವನ್ನು ಹೇಳುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ ; ಏಕೆಂದರೆ ಅದು ತಮಗೆ ಚೆನ್ನಾಗಿ ಗೊತ್ತಿದೆ. ಇನ್ನು ಮೇಲಾದರೂ ಆ ರೀತಿ ನಡೆಯುವುದಕ್ಕೆ ಅವಕಾಶ ಕೊಡಬೇಡಿ ಎಂದು ಮೊಗಮ್ ಆಗಿ ಇಷ್ಟು ಮಾತ್ರ ಹೇಳುತ್ತೇನೆ ಈಗ ಆ ಸೊಸೈಟಿಯನ್ನು ಮಂತ್ರಿಗಳೇ ಹ್ಯಾಂಡಲ್ ಮಾಡುತ್ತಿದ್ದಾರೆ ; ಆದರೂ ಕೂಡ ಈ ಮಟ್ಟಕ್ಕೆ ಬಂದಿದೆಯಲ್ಲ ಎಂದು ಶೋಚನೀಯವಾಗುತ್ತದೆ. ಟೈಂ ಇದ್ದರೆ ವಿವರವಾಗಿ ಹೇಳುತ್ತಿದ್ದೆ.

ಶ್ರೀ ಹೆಚ್. ಡಿ. ದೇವೇಗೌಡ —ಯಾವುದೋ ತಾಲ್ಲೂಕು ಮಟ್ಟದ ಸೊಸೈಟಿಯಲ್ಲಿ ಅಷ್ಟು ಫೋನ್ ತಿರುಗಿಸುತ್ತಾರೆ, ಇಷ್ಟು ಫೋನ್ ತಿರುಗಿಸುತ್ತಾರೆಂದು ಹೇಳುವುದಕ್ಕೆ ಬದಲಾಗಿ ಮಂತ್ರಿಗಳು ಮ್ಯಾನೇಜ್ ಮಾಡುವ ಸೊಸೈಟಿಯ ಬಗ್ಗೆ ವಿವರವಾಗಿ ಹೇಳಿ ; ದೇಶಕ್ಕೆಲ್ಲ ಗೊತ್ತಾಗಲಿ ಅದು ಹೇಗೆ ನಡೆಯುತ್ತಿದೆ ಎಂದು. ನೀವು ನಮ್ಮ ಪಕ್ಷದ ಜನವಾದ್ದರಿಂದ ನಮ್ಮ ಕಾಲವನ್ನು ನಿಮಗೆ ಕೊಡುತ್ತೇವೆ Why do you worry about time ?

(ವಿರೋಧ ಪಕ್ಷದ ಒಬ್ಬರು ಮಾನ್ಯ ಸದಸ್ಯರು ಈ ಸಂದರ್ಭದಲ್ಲಿ ಅದಕ್ಕೆ ಸಪೋರ್ಟ್ ಮಾಡಿದರು)

ಶ್ರೀ ವೈ. ರಾಮಕೃಷ್ಣ.—ಕಳೆದ ವರ್ಷ ಅಪೆಕ್ಸ್ ಬ್ಯಾಂಕಿನಲ್ಲಿ ಹಣ ಕಳ್ಳತನವಾಯಿತೆಂದು ಪತ್ರಿಕೆಯಲ್ಲಿ ಓದಿದೆ.

ತಮಗೆ ಗೊತ್ತಿದೆ ಅಲ್ಲಿ ೩ ಲಕ್ಷ ರೂಪಾಯಿಗಳ ಕಳ್ಳತನವಾಗಿದೆ. ಇದನ್ನು ಏದಾದರೂ ಪತ್ತೆ ಹಚ್ಚಿದ್ದೀರಾ? ಇದನ್ನು ಪತ್ತೆ ಹಚ್ಚುವುದಕ್ಕೆ ನಿಮಗೆ ಏತಕ್ಕೆ ಆಗಲಿಲ್ಲ? ಅಪೆಕ್ಸ್ ಬ್ಯಾಂಕಿನಲ್ಲಿ ೩ ಲಕ್ಷ ರೂಪಾಯಿಗಳು ಕಳ್ಳತನವಾಯಿತು, ಪ್ರೈಮರಿ ಲ್ಯಾಂಡ್ ಬ್ಯಾಂಕ್‌ನಲ್ಲಿ ೨೫ ಸಾವಿರ ರೂಪಾಯಿಗಳಾದರೂ ಏನಂತೆ, ಡಿಸ್ಟ್ರಿಕ್ಟ್ ಕೋಆಪರೇಟಿವ್ ಬ್ಯಾಂಕ್‌ನಲ್ಲಿ ೧ ಲಕ್ಷ ರೂಪಾಯಿಗಳಾದರೂ ಏನಂತೆ ಎನ್ನತಕ್ಕಂಥ ಮನೋಭಾವನೆ ಬಂದರೆ ನಾವೇ ಅವರಿಗೆ ಕಳ್ಳತನ ಮಾಡುವುದಕ್ಕೆ ಅವಕಾಶ ಕೊಟ್ಟಹಾಗೆ ಆಗುತ್ತದೆ. ನಾನು ಹೇಳುವುದೇನೆಂದರೆ ಸರ್ಕಾರಕ್ಕೆ ಇದರಿಂದ ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ, ಇದರಲ್ಲಿ ಕಳ್ಳರು ಯಾರಿದ್ದಾರೆ? ಇದು ಹೇಗೆ ನಡೆಯಿತು? ಇದರಲ್ಲಿ ನಮ್ಮ ರಾಜ್ಯದ ನೌಕರರು ಯಾರಾದರೂ ಶಾಮೀಲಾಗಿದ್ದಾರೆಯೋ? ಅಥವಾ ಬ್ಯಾಂಕ್ ನೌಕರರು ಶಾಮೀಲಾಗಿದ್ದಾರೆಯೋ ಎಂಬುದನ್ನು ಪತ್ತೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ನಾನು ಹೇಳತಕ್ಕಂಥಾದ್ದು ೩ ಲಕ್ಷ ರೂಪಾಯಿಗಳ ಪ್ರಶ್ನೆ ಅಲ್ಲ, ಇದು ತತ್ವದ ಪ್ರಶ್ನೆ. ಅಪೆಕ್ಸ್ ಬ್ಯಾಂಕ್‌ನಲ್ಲಿ ಕಳ್ಳತನವಾಯಿತು ಎಂದರೆ ನಾವು ಯಾರ ಮೇಲೆ ಅಪರಾಧ ಹೊರಿಸುವುದು? ಪೇಪರಿನಲ್ಲಿ ಏನೋ ಒಂದನ್ನು ಹಾಕಿರುತ್ತಾರೆ. ಅದು ತೃಪ್ತಿಕರವಾಗಿರುವುದಿಲ್ಲ ಈ ಒಂದು ಪ್ರಕರಣದಲ್ಲಿ ಯಾರ್ಯಾರು ಇದ್ದಾರೆ, ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ತಾವು ಮಾಹಿತಿಯನ್ನು ಈ ಸಭೆಗೆ ಕೊಡಬೇಕು. ಇನ್ನೊಂದು ಕರ್ನಾಟಕ ಸ್ಟೇಟ್ ವುಲ್ಲನ್ ಹ್ಯಾಂಡ್‌ಲೂಮ್ ವೀವರ್ಸ್ ಕೋಆಪರೇಟಿವ್ ಸೊಸೈಟಿ ಎಂದು ಇದೆ. ಇದು ಬಡವರ ಸೊಸೈಟಿ. ಇದು ಎಲ್ಲಿದೆ ಎಂದರೆ ನಿಮ್ಮ ರಿಜಿಸ್ಟ್ರಾರ ಆಫೀಸಿನ ಎದುರುಗಡೆ ಇದೆ. ಈ ಸೊಸೈಟಿಯವರು ರಾಣೆಬೆನ್ನೂರು ಸೊಸೈಟಿಯಿಂದ ೧½ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳತಕ್ಕಂಥ ಸುಮಾರು ೮೦೦೦ ಕಂಬಳಿಗಳನ್ನು ತರಿಸಿದ್ದಾರೆ. ಮಾರ್ಚಿ ೩೧ರೊಳಗೆ ಹಣವೆಲ್ಲಾ ಖರ್ಚಾಗಬೇಕಲ್ಲಾ ಅದಕ್ಕೆ ಅದನ್ನು ತರಿಸಿದ್ದಾರೆ. ವುಲ್ಲನ್ ನೇಕಾರರಿಗೆ ಆದರಿಂದ ಅನುಕೂಲವಾಗಲಿ ಎಂದು ಅದನ್ನು ತರಿಸಲಿಲ್ಲ, ಬಡವರು ಅದನ್ನು ಕೊಂಡುಕೊಳ್ಳಲಿ ಎಂದು ಅದನ್ನು ತರಿಸಲಿಲ್ಲ, ಹಣ ಖರ್ಚು ಮಾಡಿದ್ದನ್ನು ತೋರಿಸುವುದಕ್ಕಾಗಿ ಆ ಕಂಬಳಿಗಳನ್ನು ತರಿಸಿಬಿಟ್ಟು ಬೇಜವಾಬ್ದಾರಿಯಿಂದ ನೋಡಿಕೊಂಡಿದ್ದಾರೆ ೬ ವರ್ಷದಿಂದ ಇಟ್ಟ ಕಂಬಳಿಗಳು ಏನಾದುವು ಎಂದು ಯಾರಾದರೂ ನೋಡಿದ್ದಾರೆಯೋ? ಒಂದೂವರೆ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳತಕ್ಕಂಥ ಕಂಬಳಿಗಳು ಏನಾದುವು ಎಂದು ಯಾರೂ ನೋಡಲಿಲ್ಲ. ಆ ಕಂಬಳಿಗಳನ್ನೆಲ್ಲಾ ಇಲಿಗಳು, ಹೆಗ್ಗಣಗಳು ತಿಂದು ಹರಿದು ಚೂರು ಚೂರಾಗಿ ಬಿದ್ದಿದೆ. ಇದನ್ನು ತೆಗೆದುಕೊಳ್ಳುವುದಕ್ಕೆ ಯಾರಾದರೂ ಎಷ್ಟು ಬೆಲೆ ಬೇಕಾದರೂ ಕೊಡಬಹುದು, ನಿಮ್ಮ ಆಡಿಟ್ ರಿಪೋರ್ಟ್ ಪ್ರಕಾರ ೨ ರೂಪಾಯಿಗಳಿಗಿಂತ ಕಡಿಮೆ ಬೆಲೆಗೆ ಅವುಗಳನ್ನೆಲ್ಲಾ ಕೊಟ್ಟುಬಿಟ್ಟಿದ್ದಾರೆ. ಇದರಿಂದ ತಮಗೆ ೧೬೦೦ ರೂಪಾಯಿಗಳು ಬಂದಿರಬಹುದು. ೧½ ಲಕ್ಷ ರೂಪಾಯಿಗಳಷ್ಟು ಬೆಲೆಬಾಳತಕಂಥ ಕಂಬಳಿಗಳಿಗೆ ೧೬೦೦ ರೂಪಾಯಿಗಳು ಬಂದಿದೆಯೆಂದರೆ ಇದಕ್ಕೆ ಕಾರಣರು ಯಾರು ಎಂದು ಕೇಳುತ್ತೇನೆ, ಈ ಬಗೆ ತಾವೇನಾದರೂ ತನಿಖೆ ನಡೆಸಿ ಯಾರನ್ನಾದರೂ ಸಸ್ಪೆಂಡ್ ಮಾಡಿದ್ದೀರಾ? ಷೇರ್ ಬಂಡವಾಳದಾರರಿಗೆ ನ್ಯಾಯವನ್ನು ದೊರಕಿಸಿ ಕೊಟ್ಟಿದ್ದೀರಾ? ಈ ಕಡೆಗೆ ತಾವು ಗಮನಕೊಡಬೇಕು. ಇದಲ್ಲದೇ ವೈಶ್ಯ ಕೋಆಪರೇಟಿವ್ ಸೊಸೈಟಿಯಲ್ಲಿ ಬಹಳಷ್ಟು ಮಿಸ್‌ಅಪ್ರೋಪ್ರಿಯೇಷನ್ ನಡೆದಿದೆ ಅಂತಾರೆ ಈ ವಿಚಾರದಲ್ಲಿ ತಾವು ಎನ್‌ಕ್ವೈರಿ ಮಾಡಿರಬೇಕು ಎಂದು ನನಗನ್ನಿಸುತ್ತಿದೆ; ಮತ್ತು ಈ ವಿಚಾರ ತಮ್ಮ ಮುಖ್ಯಾಧಿಕಾರಿಗಳ ಹತ್ತಿರ ಇರಬೇಕು ಎಂದು ಕಾಣಿಸುತ್ತಿದೆ. ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಕೋ-ಆಪರೇಟಿವ್ ಬ್ಯಾಂಕ್‌ಗಳ ಬಗೆ ಜನಗಳಿಗೆ ಅಪನಂಬಿಕೆ ಬರುವುದಕ್ಕೆ ಪ್ರಾರಂಭ ಆದರೆ ನಿಮ್ಮ ಇಡೀ ಡಿಪಾರ್ಟ್‌ಮೆಂಟಿಗೇ ತಿಲಾಂಜಲಿಯನ್ನು ಕೊಟ್ಟಹಾಗೆ ಆಗುತ್ತದೆ. ಆದ್ದರಿಂದ ದಯಮಾಡಿ ತಾವು ಖುದ್ದಾಗಿ ಈ ಕಡೆಗೆ ಗಮನಕೊಟ್ಟು ಇದರ ಉಸ್ತುವಾರಿಯನ್ನು ನೋಡಬೇಕು ಎಂದು ಹೇಳುತೇನೆ. ಇನ್ನು ಬೆಂಗಳೂರು ಡೈರಿ ಮಿಲ್ಕ್ ಪ್ರೊಡ್ಯೂಸರ್ಸ್ ಕೋಆಪರೇಟಿವ್ ಯೂನಿಯನ್ ಎಂದು ಮಾಡಿಕೊಂಡಿದ್ದಾರೆ. ಈ ಯೂನಿಯನ್ ಸದಸ್ಯರು ಜನರಲ್ ಬಾಡಿ ಮೀಟಿಂಗ್ ನಡೆಸುವುದು ಬೆಂಗಳೂರು ಡೈರಿಯಲ್ಲಿ. ಅವರು ಕಾಫಿ, ತಿಂಡಿ, ಊಟ, ವಗೈರೆ ಇದನ್ನೆಲ್ಲಾ ಮಾಡುವುದು ಅಶೋಕ ಹೋಟಲ್‌ನಲ್ಲಿ ಮತ್ತು ವೆಸ್ಟ್‌ಎಂಡ್ ಹೋಟಲ್‌ನಲ್ಲಿ. ಇದಕ್ಕೆಲ್ಲಾ ೫, ೧೦, ೨೦ ಸಾವಿರದವರೆಗೂ ಖರ್ಚು ಮಾಡುತ್ತಾರೆ. ಇದಕ್ಕೆ ಎಲ್ಲಿದೆ ಮಿತಿ? ಅವರು ಇನ್ನೊಂದು ಸಾರಿ ಮೀಟಿಂಗ್ ನಡೆಸುವುದಕ್ಕೆ ತಾವು ಅವಕಾಶ ಮಾಡಕೊಟ್ಟರೆ ನಿಮ್ಮ ಷೇರ್ ಕ್ಯಾಪಿಟಲ್ ಉಳಿಯುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಸದಸ್ಯರು ಎಷ್ಟು ಜನ ಬಂದಿದ್ದರು?

ಶ್ರೀ ವೈ. ರಾಮಕೃಷ್ಣ.—ಸುಮಾರು ೬೦ ಜನ ಬಂದಿದ್ದರು ಎಂದು ಕಾಣುತ್ತದೆ. ಆದ್ದರಿಂದ ಪ್ರತಿಯೊಂದು ಸೊಸೈಟಿಯನ್ನೂ ಆಡಿಟ್ ಮಾಡಿಕೊಂಡು ಎಲ್ಲೆಲ್ಲಿ ಯಾವತರಹದ ದಬ್ಬಾಳಿಕೆ ನಡೆಯುತ್ತಿದೆ ಎಂಬುದನ್ನು ತಿಳಿದುಕೊಂಡು ಇದನ್ನು ಸರಿಪಡಿಸಲು ಒಂದು ಅಮೆಂಡ್‌ಮೆಂಟ್ ತಂದರೆ ಉತ್ತಮ ಎಂದು ಹೇಳುತ್ತೇನೆ. ಆಮೇಲೆ ಇನ್ನೊಂದು ಸೊಸೈಟಿ ಇದೆ, ಅದು ಯಾವುದೆಂದರೆ ಶ್ರೀಶೈಲ ಕೋಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ ಎಂದು. ಇದರಲ್ಲಿ ಹೆಗ್ಡೆ ಅಂಡ್ ಗೋಲೆ ಫ್ಯಾಕ್ಟರಿ ಇದೆ, ಇದರ ವಿಚಾರವಂತೂ ವಿಚಿತ್ರವಾಗಿದೆ. ಇದಕ್ಕೆ ನಮ್ಮ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್‌ನವರು ೪೦ ಎಕರೆ ಜಮೀನನ್ನು ಕೊಟ್ಟರು ಅವರು ಚೆನ್ನಾಗಿ ಕೆಲಸಮಾಡಲಿ ಎಂದು ಆದರೆ ಅವರು ಏನು ಮಾಡಿದ್ದಾರೆ ಎಂದರೆ ಅವರು ೧೯ ಜನಗಳೂ ಸೇರಿ ಅಂಡರ್ ಕಂಪನಿ ಆಕ್ಟ್ ೧೯ ಇಂಡಿಪೆಂಡೆಂಟ್ ಕಂಪನಿಗಳನ್ನು ಸೃಷ್ಟಿ ಮಾಡಿ ಪ್ರಾರಂಭ ಮಾಡಿದ್ದಾರೆ. ಪ್ರತಿಯೊಂದರಲ್ಲೂ ಷೆಡ್‌ಗಳನ್ನು ಹಾಕಿಕೊಂಡು ಕೆಲಸಕಾರ್ಯಗಳನ್ನು ನಡೆಸುತ್ತಿದ್ದಾರೆ ನಾನು ತಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ, ಏನೆಂದರೆ ತಮ್ಮ ಕೋಆಪರೇಟಿವ್ ಆಕ್ಟ್‌ನಲ್ಲಿ ಲಿಮಿಟೆಡ್ ಕಂಪನೀಸ್ ಎಂದು ಇರಬೇಕಾದರೆ ಒಂದಕ್ಕಿಂತ ಹೆಚ್ಚು ಕೋಆಪರೇಟಿವ್ ಸೊಸೈಟಿಗಳನ್ನು ರಿಜಿಸ್ಟರ್ ಮಾಡಿ ಎಂದರೆ ತಾವು ಮಾಡುತ್ತೀರಾ? ಆ ರೀತಿ ಮಾಡುವುದಕ್ಕೆ ಸಾಧ್ಯವೇ? ೯ ಕಂಪನಿಗಳನ್ನು ತಮ್ಮ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿರುವಾಗ ಆ ರೀತಿ ರಿಜಿಸ್ಟರ್ ಮಾಡುವುದಕ್ಕೆ ತಮ್ಮ ಇಲಾಖೆಗೆ ಹಕ್ಕು ಇದೆಯೋ ಎಂದು ಕೇಳುತ್ತೇನೆ ಅವರು ಇನ್ನೂ ಏನು ಮಾಡಿದ್ದಾರೆ ಎಂದರೆ ೪೦ ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಹಣವನ್ನು ಕೊಟ್ಟಿಲ್ಲ. ಆದರೆ ಸೊಸೈಟಿ ಆಕ್ಟ್ ಪ್ರಕಾರ ಮಾಲೀಕತ್ವವನ್ನು ಹೊಂದಿದ್ದಾರೆ. ಸಾಲಸೋಲ ಮಾಡಿ ರಿಸರ್ವ್‌ಬ್ಯಾಂಕ್‌ನಿಂದ ಸ್ಯಾಂಕ್ಷನ್ ತೆಗೆದುಕೊಂಡು ಬಿಟ್ಟಿದ್ದಾರೆ. ಈ ಸ್ಯಾಂಕ್ಷನ್ ಜೊತೆಯಲ್ಲಿ ಇನ್ನೂ ಏನೇನು ತೆಗೆದುಕೊಳ್ಳುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಲಕ್ಷಾಂತರ ರೂಪಾಯಿಗಳಷ್ಟು ಹಣ ಸೋರಿ ಹೋಗುತ್ತಿದೆ. ಅಂತಹ ಸೊಸೈಟಿಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಇದು ಸೆಕ್ಷನ್ ೧೬ರ ಪ್ರಕಾರ ಅತ್ಯಂತ ನ್ಯಾಯಬಾಹಿರವಾಗಿದೆ. ಇದಕ್ಕೆ ಕಾರಣವೇನೆಂದರೆ ಲಾ ತಿಳಿಯದೇ ಇರತಕ್ಕಂಥವರನ್ನು ಡೆಪ್ಯುಟಿ ರಿಜಿಸ್ಟ್ರಾರ್ ಆಗಿ ರಿಜಿಸ್ಟ್ರಾರ್ ನೇಮಿಸಿದರೆ ಇಂತಹ ಸೊಸೈಟಿಗಳಿಗೆ ಅವಕಾಶ ಕೊಡುತ್ತಾರೆ. ಇದೇ ರೀತಿ ಆಗುತ್ತಾ ಹೋದರೆ ಏನೇನು ಅನಾಹುತಗಳು ಆಗುತ್ತವೆಯೋ ಗೊತ್ತಿಲ್ಲ. ಅಂತಹ ಮಹನೀಯರುಗಳು ಮಾಡಿದಂಥ ಸೊಸೈಟಿಗಳ ಪಾಡು ಈ ರೀತಿ ಆಗಿರಬೇಕಾದರೆ ಇನ್ನು ಸಣ್ಣಪುಟ್ಟ ಹರಿಜನರ ಗಿರಿಜನರ ಸೊಸೈಟಿಗಳ ಪಾಡು ಏನಾಗಿರಬೇಕು ! ರಿಸರ್ವ್‌ಬ್ಯಾಂಕ್ ನವರು ಮಾಡಿರುವ ಸೊಸೈಟಿಗಳ ಪಾಡು ಏನಾಗಿರಬೇಕು ಎಂಬುದನ್ನು ನಾವು ಯೋಚನೆ ಮಾಡಬೇಕು. ಹರಿಜನರ ಗಿರಿಜನರ ಪುರೋಭಿವೃದ್ಧಿಗಾಗಿ ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ. ಅವರಿಗೆ ಏನೂ ಕೆಲಸವೇ ಇಲ್ಲ. ನಾನು ಹಿಂದೆ ೧೯೫೭ರಲ್ಲಿ ಎಂ.ಎಲ್.ಎ ಆಗಿದ್ದಾಗ ಎರಡು ಸೊಸೈಟಿಗಳು ಅಸ್ತಿತ್ವಕ್ಕೆ ಬಂದುವು. ಅದರಲ್ಲಿ ಮಂಗಳವಾರಪಳ್ಳಿ ಹರಿಜನ ಗಿರಿಜನರ ಅಗ್ರಿಕಲ್ಚರಲ್ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿ ಒಂದು. ಇದು ನೂರಕ್ಕೆ ನೂರು ಭಾಗ ಸ್ಟೇಟ್ ಗೌರ್ನಮೆಂಟ್‌ಗೆ ಸೇರಿದೆ. ಇದು ಬೆಂಗಳೂರಿನ ಯಶವಂತಪುರದ ಭಾಗದಲ್ಲಿ ಇದೆ. ಆ ಸೊಸೈಟಿ ರಿಜಿಸ್ಟರ್ ಆದಮೇಲೆ ಬೈಲಾ ಅನುಸರಿಸಿ ಅವರಿಗೆ ಕೊಟ್ಟಂತಹ ಜಮೀನು ಇವತ್ತು ಯಾರವಶದಲ್ಲಿ ಇದೆ ಎಂಬುದನ್ನು ತಾವು ಪತ್ತೆ ಹಚ್ಚಲೇಬೇಕೆಂದು ಹೇಳುತ್ತೇನೆ. ಅಲ್ಲಿರತಕ್ಕಂಥವರು ಬಡವರು ಎಂದು ಹೇಳಿ ಎಲ್ಲರಿಗೂ ೨ ಎಕರೆಯಷ್ಟು ಭೂಮಿಯನ್ನು ಹಂಚಿದ್ದಾರೆ. ಒಂದೊಂದು ಎಕರೆ ಜಮೀನು ಒಂದು ಅರ್ಧಲಕ್ಷಕ್ಕೂ ಮೇಲ್ಪಟ್ಟು ಬೆಲೆ ಬಾಳುತ್ತದೆ. ಅವರಲ್ಲಿ ಒಬ್ಬರಾದರೂ ಜಮೀನನ್ನು ಇಟ್ಟುಕೊಂಡಿದ್ದಾರೆಯೋ ಎಂದು ನೋಡಿದರೆ ಯಾರು ಇಟ್ಟುಕೊಂಡಿಲ್ಲ. ಆ ಜಮೀನುಗಳನ್ನು ಬೇರೆಯವರಿಗೆ ಪರಭಾರೆ ಮಾಡುವಾಗ ನಿಮ್ಮ ಕೋಆಪರೇಟಿವ್ ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಿದ್ದರು ಎಂದು ಕೇಳುತ್ತೇನೆ. ಅದರ ಜೊತೆಗೆ ಅವರಿಗೆಲ್ಲ ಸಾಲ ಕೊಟ್ಟಿದ್ದಾರೆ. ಇದರಲ್ಲಿ ತೀವ್ರತರವಾದ ಡಿಫಾಲ್ಕೇಷನ್ ಸಹ ಆಗಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಮಂಗಳವಾರಪಳ್ಳಿ ಹರಿಜನ ಗಿರಿಜನರ ಅಗ್ರಿಕಲ್ಚರಲ್ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿಯವರಿಗೆ ಕೊಟ್ಟಂತಹ ಹಣದ ಬಗ್ಗೆ ಇರತಕ್ಕಂಥ ಲೆಕ್ಕ ಪತ್ರಗಳು ಏನಾಯಿತು? ಅದೆಲ್ಲಾ ರಿಜಿಸ್ಟ್ರಾರ್‌ರವರ ಹತ್ತಿರ ಇದೆಯೇ? ಈ ಬಗ್ಗೆ ತಾವು ದಯವಿಟ್ಟು ಗಮನ ಕೊಡಬೇಕು. ಅದರ ಹೆಸರೇ ಇಲ್ಲ. ಎರಡನೆಯದು ಹೊಸಕೋಟೆಯ ಕಾಡುಗೋಡಿ ಹರಿಜನ ಮತ್ತು ಗಿರಿಜನ ಕೃಷಿ ಸಹಕಾರ ಸಂಘ. ಇದಕ್ಕೂ ಅದೇ ಗತಿ ಬಂದಿರಬಹುದೇನೋ, ನನಗೆ ಗೊತ್ತಿಲ್ಲ; ಆಗಿನ ಕಾಲದ ಸಹಕಾರ ಚಳವಳಿಯಲ್ಲಿ ಶಿಶುಗಳಾಗಿದ್ದ

ಇವುಗಳ ಹತ್ಯೆಯಾಗಿದೆ, ಹೀಗಾಗಿ ನನ್ನದು, ತನ್ನದು ಎಂದು ಯಾವುದರಲ್ಲಿ ಆಸಕ್ತಿ ರೈತರು ತೆಗೆದುಕೊಳ್ಳುತ್ತಾರೆ ಅದರಲ್ಲಿ ಉತ್ಪತ್ತಿ ಇರುತ್ತದೆಯೇ ಹೊರತು ಈ ಸಹಕಾರ ಸಂಘಗಳೆಂದರೆ ಅವು ಏಳಿಗೆಯಾಗುವುದಿಲ್ಲ. ಇದಕ್ಕೋಸ್ಕರ ಸೂಚನೆ ರೂಪದಲ್ಲಿ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮೈಕೋ ಗೃಹನಿರ್ಮಾಣ ಸಹಕಾರ ಸಂಘದ್ದು ದೊಡ್ಡ ಹಗರಣವಾಗಿದೆ. ಅಲ್ಲಿ ಸುಮಾರು ೮೦ ಲಕ್ಷ ರೂಪಾಯಿಗಳ ದುರ್ವಿನಿಯೋಗವಾಗಿದೆ. ಅದಕ್ಕೆ ಸಂಬಂಧಪಟ್ಟವರು ದೇಶ ಬಿಟ್ಟು ಹೋಗುವುದಕ್ಕೆ ತಯಾರಾಗಿದ್ದರು. ಅದನ್ನು ತಿಳಿದು ಅವರ ಪಾಸ್‌ಪೋರ್ಟ್ ಇಂಪೌಂಡ್ ಮಾಡಿ, ಅವರು ದೇಶ ಬಿಟ್ಟು ಹೋಗದ ಹಾಗೆ ಮಾಡಲಾಗಿದೆ.

ಶ್ರೀ ಎ. ಲಕ್ಷ್ಮಿಸಾಗರ್.—ಯಾರವರು ?

ಶ್ರೀ ವೈ. ರಾಮಕೃಷ್ಣ.—ಅವರ್ಯಾರೆಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಲಿ. ಇನ್ನು ಕರ್ನಾಟಕ ಕೋ-ಆಪರೇಟಿವ್ ಕೋಲ್ಡ್ ಸ್ಟೋರೇಜ್ ಸೊಸೈಟಿಯಲ್ಲಿ ಸುಮಾರು ೨ ಲಕ್ಷ ರೂಪಾಯಿಗಳ ನಷ್ಟವಾಗಿದೆ. ಇದು ರೈತರ ಉದ್ಧಾರಕ್ಕಾಗಿ ಮಾಡಿದ ಸಂಘ. ಇದನ್ನು ಸ್ಥಾಪನೆ ಮಾಡುವಾಗ, ಫೀಜಬಿಲಿಟಿ ಮತ್ತು ಪ್ರಾಜೆಕ್ಟ್ ರಿಪೋರ್ಟನ್ನು ನೋಡಲಿಲ್ಲ. ಫೀಜಬಿಲಿಟಿ ರಿಪೋರ್ಟ್ ಮತ್ತು ಪ್ರಾಜೆಕ್ಟ್ ರಿಪೋರ್ಟ್—ಈ ಎರಡೂ ಸರಿ ಬಂದಾಗ ನಾವು ಇಂತಹ ಸಂಸ್ಥೆಗಳ ಸ್ಥಾಪನೆಯ ಕೆಲಸಕ್ಕೆ ಕೈಹಾಕಬೇಕೇ ಹೊರತು ಇಲ್ಲದಿದ್ದರೆ ಹಾಕಬಾರದು. ಒಂದು ವೇಳೆ ಕೈಹಾಕಿದರೆ ಏನಾಗುತ್ತದೆನ್ನುವುದಕ್ಕೆ ಈ ಸಂಘ ಒಂದು ಉದಾಹರಣೆ. ಆದುದರಿಂದ, ಇಂದು ಸಹಕಾರ ಸಂಘಗಳ ಪುನರುದ್ಧಾರವಾಗಬೇಕಾಗಿದೆ. ಅವುಗಳ ಪುನರುದ್ಧಾರವಾಗಬೇಕಾದರೆ ನೀವು ಶುದ್ಧೀಕರಣ ಕೆಲಸಕ್ಕೆ ಕೈಹಾಕಬೇಕು. ನಾನು ಮೊದಲು ಹೇಳಿದ ನಾಲ್ಕು ತತ್ವಗಳನ್ನು ಅಳವಡಿಸಿಕೊಂಡಿದ್ದೇ ಆದರೆ ಸಹಕಾರ ಸಂಘಗಳ ಪುನರುದ್ಧಾರವಾಗುತ್ತದೆ. ಅವು ಯಾವುವೆಂದರೆ, (1) De-politicalisation (2) De-officialisation. (3) Effective and strong enquiry and inspection and (4) Strong independent audit.

ಹಾಗೆಯೇ, ನಾನು ಸೂಚನೆ ಮಾಡಿದ ಹಾಗೆ ಸರ್ಕಾರದವರು ಆಕ್ಟ್‌ಗೆ ತಿದ್ದುಪಡಿ ತಂದರೆ, ಸಹಕಾರಿ ಸಂಘಗಳ ಶುದ್ಧೀಕರಣಕ್ಕೆ ನಮ್ಮ ಕೈಯಿಂದಾಗುವ ಎಲ್ಲ ಸಹಕಾರ ನೀಡುತ್ತೇವೆಂದು ಭರವಸೆ ಕೊಡುತ್ತೇನೆ. ಇವುಗಳನ್ನು ಸಹಕಾರ ತತ್ವದ ಮೇಲೆ ನಡೆಸಿಕೊಂಡು ಹೋಗಬೇಕೇ ಹೊರತು ಇವುಗಳಿಗೆ ರಾಷ್ಟ್ರೀಕರಣದಲ್ಲೂ ಭವಿಷ್ಯವಿಲ್ಲ ಮತ್ತು ಸಾರ್ವಜನಿಕ ಕಂಪನಿಗಳಲ್ಲೂ ಮೋಕ್ಷವಿಲ್ಲದಂತಾಗಿದೆ. ಆದುದರಿಂದ, ಸಹಕಾರಿ ಸಂಘಗಳ ಶುದ್ಧೀಕರಣಕ್ಕನುಕೂಲವಾಗುವಂತೆ ಸೂಕ್ತ ತಿದ್ದುಪಡಿಗಳನ್ನು ತಂದು, ಮಾನ್ಯ ಸಹಕಾರ ಸಚಿವರು ದೊಡ್ಡ ಹೆಸರು ಪಡೆಯಬೇಕೆಂದು ಕೇಳಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

† SRI M. C. NANAIAH (MADIKERE) :— Madam Deputy Speaker, my learned friend Sri Y. Ramakrishna has detailed some of the irregularities that are there in the working of the institutions mostly in Bangalore City. After hearing me, I though, whether the co-operative movement is confined only to Bangalore City or the whole of Karnataka. I do concede that there are irregularities in the working of some of the institutions not only in Bangalore City but in several parts of Karnataka ; But magnifying only the irregularities would not speak well of the co-operative movement. As you have already pointed, there are as many as 22,000 co-operative societies in our State with a share capital more than Rs. 480 Crores and the total turn-over of these institutions put together would be of the order of Rs. 12 00 Crores ; May be irregularities, confined to about 40 societies or 50 societies. I don't deny that; But, these institutions are there, as Mr, Ramakrishna pointed out, in the

